	3)ಕೆ. ದುರ್ಗಾದಾಸ್, ಸ.ಇಂ 4)ಎಂ. ಸೋಮನಾಥ, ಕಿ.ಇಂ 5)ಚರ್ಮಣ್ಣ, ಕಿಇಂ ಇವರುಗಳು ಉಡುಪಿ ಜಿಪಂಇಂಲ್ಲ ಉಪ ವಿಭಾಗದಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ಪ್ರಕರಣವನ್ನು ನಿಯಮ 14–ಎ ಪ್ರಕಾರ ಲೋಕಾಯುಕ್ತಕ್ಕೆ 27–10–03ರಂದು ವಹಿಸಿದೆ.
91.	1)ಸಿ.ಅನಂತರಾಮು, ಕಾಇಂ 2) ಎಂ. ಮಂಜುನಾಥನಾಯರಿ, ಸಕಾಇಂ ಇವರುಗಳು ಉಡುಪಿ,ಜಿಪಂ ವ್ಯಾಪ್ತಿಯಲ್ಲಿ ಪಾರದರ್ಶಕ ನಿಯಮಗಳನ್ನು ಅನುಸರಿಸದೆ ಟೆಂಡರ್ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ ನಿವೃತ್ತ ನ್ಯಾಯಾಧೀಶರಾದ ಶ್ರೀ ಎಸ್. ಇಂದೂಧರ ಇವರನ್ನು ದಿ. 22–9–04ರಂದು ನೇಮಿಸಿದೆ.
92.	1)ಅನಂತರಾಮು, ಕಾಇಂ 2)ಟಿ.ಆರ್. ಶಿವರಾಮು, ಸಕಾಇಂ 3)ಟಿ.ಜಿ. ತಿಮ್ಮೇಗೌಡ,ಸ.ಇಂ 4) ಕೆ. ದುರ್ಗಾದಾಸ್, ಸ.ಇಂ 5)ಸಿ. ಸೂರ್ಯನಾರಾಯಣ ಕಿ.ಇಂ	ಜಂಟಿ ಇಲಾಖಾ ವಿಚಾರಣೆ ನಡೆಸುತ್ತಿರುವ ಶ್ರೀ ಎಸ್. ಇಂದೂಧರ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ವಿಚಾರಣಾಧಿಕಾರಿ ಇವರಿಗೆ ವಹಿಸಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
	ಇವರುಗಳು ಉಡುಪಿ ಜಿಪಂಇಂ ವಿಭಾಗದ/ಉಪ ವಿಭಾಗದ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	
93.	1) ಜೆ.ಸಿ. ರಾಮಸ್ವಾಮಿ, ಸಕಾಇಂ 2) ರವಿಕುಮಾರ್, ದ್ವಿದ.ಸ್ಲೆ ನರಸಿಂಹರಾಜಪುರ, ಜಿಪಂಇಂ ಉಪವಿಭಾಗದ ಉಗ್ರಾಣದಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ಸದರಿ ಪ್ರಕರಣದಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ ನಿವೃತ್ತ ನ್ಯಾಯಾಧೀಶರಾದ ಶ್ರೀ ಟಿ.ಜಿ. ಮರಿಯಪ್ಪ ಇವರನ್ನು ದಿ. 7–9–04ರಂದು ನೇಮಿಸಿದೆ.
94.	1)ಟಿ.ಜಿ.ಚಂದ್ರಶೇಖರ್, ಸಕಾಇಂ ಮೈಸೂರು ಜಿಲ್ಲೆ, ಟಿ. ನರಸಿಪುರ, ಜಿಪಂಇಂ ಉಪವಿಭಾಗ ವ್ಯಾಪ್ತಿಯ ಕೇತುಹಳ್ಳಿ ನೀರಿನ ಟ್ಯಾಂಕ್ಗಳ ಕಳಪೆ ಕಾಮಗಾರಿ ಮಾಡಿದ್ದಾರೆಂಬ ಬಗ್ಗೆ	ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಕೈಗೊಂಡು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಕ್ರಮ ಕೈಗೊಂಡಿದೆ.
95.	1)ಜೆ.ಸಿ.ರಾಮಣ್ಣ, ಸಕಾಇಂ 2)ಎ.ಎನ್. ಚಂದ್ರಶೇಖರ್, ಸಕಾಇಂ 3)ಡಿ.ಎ. ಶಿವಾನಂದ, ಸಕಾಇಂ 4)ಕೆ. ಕೃಷ್ಣಪ್ಪ, ಸಕಾಇಂ 5)ಲಕ್ಕೇಗೌಡ,ಸಕಾಇಂ	ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು/ಕ್ರಿಮಿನಲ್ ನಡವಳಿಗಳನ್ನು ಬಾಕಿ ಇಟ್ಟು ಅವರುಗಳನ್ನು ದಿ.29–6–04ರಂದು ಸೇವೆಯಿಂದ ಅಮಾನತ್ತುಗೊಳಿಸಿತ್ತು. ತದನಂತರ ಅವರ ಮೇಲಿನ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ದಿ. 23–12–04ರಂದು

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
	ಅರಕಲಗೂಡು ಇವರುಗಳು ಹಾಸನ ಜಿ.ಪಂ.ವ್ಯಾಪ್ತಿಯ ಬರ ಪರಿಹಾರ ಹಾಗೂ ಕೂಲಿಗಾಗಿ ಕಾಳು ಯೋಜನೆಯ ಅಕ್ಕಿ ಹಗರಣದಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ.	ಅಮಾನತ್ತನ್ನು ತೆರವುಗೊಳಿಸಿ ಲೋ.ಇ.ಗೆ ಸೇವೆಯನ್ನು ಹಿಂದಿರುಗಿಸಿದೆ. ಸದರಿ ಪ್ರಕರಣದಲ್ಲಿ ದೋಷಾರೋಪಣೆ ಜಾರಿ ಮಾಡಲು ಸಿ.ಓ.ಡಿ.ಯವರ ವರದಿ ಮತ್ತು ಹಾಸನ ಜಿಪಂನ ಮುಕನಿಅರವರಿಂದ ದೋಷಾರೋಪಣಾ ಪಟ್ಟಿಯನ್ನು ನಿರೀಕ್ಷಿಸಲಾಗುತ್ತಿದೆ.
96.	1)ಹೆಚ್.ವಿ.ನಂಜೇಶಯ್ಯ, ಸಕಾಇಂ 2)ವೈ.ಎಲ್.ಹರೀಶ್.ಸ.ಇಂ ಇವರುಗಳು ಹಾಸನ ಜಿ.ಪಂ ವ್ಯಾಪ್ತಿಯ ಸಮುದಾಯ ಭವನದ ಕಾಮಗಾರಿಯಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಂಡು ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಲು ಕ್ರಮ ಕೈಗೊಂಡಿದೆ.
97.	1)ಮೊಹಮ್ಮದ್ ಬಸೀರುದ್ದೀನ್,ಸಕಾಇಂ 2)ನಾರಾಯಣಗೌಡ, ಸ.ಇಂ.ಇವರುಗಳು ಮಂಡ್ಯ ಜಿಲ್ಲೆ, ನಾಗಮಂಗಲ, ಜಿಪಂಇಂ ಉಪವಿಭಾಗ ವ್ಯಾಪ್ತಿಯ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಅಧಿಕಾರಿ ನಿವೃತ್ತಿ ಹೊಂದಿರುವುದರಿಂದ ಹಾಗೂ ಮತ್ತೊಬ್ಬ ಅಧಿಕಾರಿ ಅಪ ಇಲಾಖೆಯ ವ್ಯಾಪ್ತಿಯಲ್ಲಿ ಇಲ್ಲದಿರುವುದರಿಂದ ಸದರಿಯವರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಲು ಲೋ.ಇ.ಯನ್ನು ಕೋರಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
98.	ಎ.ವೆಂಕಟೇಶ್, ಸಕಾಇಂ ಇವರು ಮಂಗಳೂರು ಜಿ.ಪಂ.ಯಾಂತ್ರಿಕ ಉಪ ವಿಭಾಗದಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ತದನಂತರ ಸಂಬಂಧಪಟ್ಟ ಮುಕಾನಿಅರವರಿಂದ ವರದಿ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.
99.	ಟಿ.ಜೆ. ಚಂದ್ರಶೇಖರ, ಅಂದಿನ ಸಕಾಇಂ, ಜಿಪಂಇಂಉವಿ, ಟಿ. ನರಸೀಪು ಇವರು ಕಾರ್ಮಿಕ ನ್ಯಾಯಾಲಯದ ಪ್ರಕರಣದಲ್ಲಿ ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲದಿರುವ ಬಗ್ಗೆ ಸದರಿ ಅಧಿಕಾರಿಯವರ ಕರ್ತವ್ಯ ಲೋಪದ ಬಗ್ಗೆ	ಸದರಿ ಅಧಿಕಾರಿಯವರ ಕರ್ತವ್ಯಲೋಪದ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳಲು ಅವರಿಗೆ ದೋಷಾರೋಪಣೆ ಜಾರಿ ಮಾಡಲು ಕ್ರಮ ಕೈಗೊಂಡಿದೆ.
100.	ಶ್ರೀ ಹೆಚ್. ಹನುಮಂತಯ್ಯ, ಸಕಾಇಂ, ಜಿಪಂಇಂ ಉಪ ವಿಭಾಗ, ಮಂಗಳೂರು ಇವರು ದಕ್ಷಿಣ ಕನ್ನಡ ಜಿಪಂ, ವ್ಯಾಪ್ತಿಯ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ಸದರಿ ಪ್ರಕರಣದಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆ ಹೂಡಲು ಸದರಿಯವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಅನುಬಂಧ-1ರಿಂದ 4ರಲ್ಲಿ ದೋ. ಪಟ್ಟಿಯನ್ನು ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
101.	ಸಿಂಧಗಿ ತಾಲ್ಲೂಕು ಮುಳಸಾವಳಗಿ ಮಂಡಳವ್ಯಾಪ್ತಿಯಲ್ಲಿ ರೋಜ್‌ಗಾರ್ ಆಹಾರ ಧಾನ್ಯ ವಿತರಣೆಯಲ್ಲಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ 1)ಆರ್. ಎಸ್. ನಂದಿಕೂರ, ಅಂ ಆಡಳಿತಾಧಿಕಾರಿ, ಮುಳಸಾವಳಗಿ 2)ಎಸ್.ಕೆ. ಮಹಾಲಿಂಗಪುರ, ಹಿಂಮಂಪಂ. ಕಾರ್ಯದರ್ಶಿ ಇವರ ಮೇಲಿನ ಇ.ವಿ.	ಜಿಲ್ಲಾಧಿಕಾರಿಗಳೂ ಬಿಜಾಪುರ ಇವರನ್ನು ದಿನಾಂಕ 21-9-2000ದ ಆದೇಶದಲ್ಲಿ ವಿಚಾರಣಾಧಿಕಾರಿಗಳನ್ನಾಗಿ ನೇಮಿಸ ಲಾಗಿದೆ. ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಕೋರಿ ದಿ. 20-8-2004ರಮದು ಕಡೆಯ ಜ್ಞಾಪನ ಪತ್ರವನ್ನು ಕಾರ್ಯದರ್ಶಿಂಯುವರ ಹೆಸರಿನಲ್ಲಿ ಹೊರಡಿಸಲಾಗಿದೆ. ವಿಚಾರಣೆ ಪ್ರಾರಂಭಿಸಲಾಗಿದ್ದು ವಿಚಾರಣಾ ವರದಿಯನ್ನು ತಕ್ಷಣ ಸಲ್ಲಿಸಲಾಗುವುದೆಂದು ವಿಚಾರಣಾಧಿಕಾರಿಗಳು ದಿ. 13-9-04ರ ಪತ್ರದಲ್ಲಿ ತಿಳಿಸಿದ್ದಾರೆ.
102.	ಮುಂಡರಗಿ ಜಿಪಂಇಂ ವಿಭಾಗದ ಉಗ್ರಾಣದಲ್ಲಿನ ರೂ. 14,92,160-05ಗಳ ಅವ್ಯವಹಾರಕ್ಕೆ ಸಂಬಂಧಿಸಿದಂತೆ 1)ಎಲ್. ಆರ್. ರಾಘ, ಹಿಂ,ಕಾಪಾಇಂ (ನಿ) 2)ಎಸ್.ಎ. ಸಜ್ಜನರ್, ಹಿಂಸಕಾಇಂ(ನಿಧನ) ಇವರ ಮೇಲಿನ ಇ.ವಿ	ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್.ಎಸ್. ಸಂಗೊಳ್ಳಿ ಇವರಿಂದ ವಿಚಾರಣಾ ವರದಿ ಬಂದಿದೆ. ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ದಿ. 16-6-2000 ರಲ್ಲಿ ತೀರ್ಪು ನೀಡಿ The respondants may proceed with the enquiry but the Disciplinary authority shall not pass any final orders without leave of this court ಎಂದು ಆದೇಶಿಸಿದೆ. ನಂತರ ಪ್ರಕರಣವು ಕೆಎಟಿಗೆ ವರ್ಗಾವಣೆಗೊಂಡಿದ್ದು, ಇನ್ನು ಇತ್ಯರ್ಥವಾಗಿಲ್ಲ, ಇದರಿಂದಾಗಿ ಪ್ರಕರಣದಲ್ಲಿ ವಿಚಾರಣಾ

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
		ವರದಿಯನ್ವಯ ಕ್ರಮಕೈಗೊಳ್ಳಲಾಗುತ್ತಿಲ್ಲ. ಪ್ರಕರಣವನ್ನು ಇತ್ಯರ್ಥಗೊಳಿಸಲು ದಿ. 26–5–04ರಂದು ಕೆಎಟಿಗೆ ಪತ್ರ ಬರೆಯಲಾಗಿದೆ.
103.	ಹಾವೇರಿ ಜಿಪಂಇಂಉವಿದಲ್ಲಿ ಸಿಮೆಂಟ್ ಸಾಗಾಣಿಕೆ ವೆಚ್ಚದ ವ್ಯವಹಾರಗಳಿಗೆ ರೂ. 16,22,476–00 ಸಂಬಂಧಿಸಿದಂತೆ 1)ಎಲ್. ಮಾಳದಕರ್ ಹಿಂಕಾಪಇಂ 2)ಹೆಚ್.ಆರ್. ಚನ್ನಗಿರಿ, ಹಿಂ ಉಗ್ರಾಣಪಾಲಕ 3)ಸಿ.ಪಿ. ಚಿದಾನಂದಪ್ಪ, ಲೆ.ಅ. ಇವರ ಮೇಲಿನ ಇ.ವಿ	ದಿ.23–7–02ರ ಆದೇಶದಲ್ಲಿ ಮುಕಾನಿ, ಜಿಪಂ, ಧಾರವಾಡರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ವಿಚಾರಣೆಯನ್ನು ತ್ವರಿತವಾಗಿ ಮುಕ್ತಾಯಗೊಳಿಸಿ ವರದಿಯನ್ನು ಸಲ್ಲಿಸಲು ಹಾಗೂ ಸಂಬಂಧಪಟ್ಟವರ ವಿರುದ್ಧ ಸಿವಿಲ್ ಮೊಕದ್ದಮೆ ಹೂಡಲು ಸೂಚಿಸಲಾಗಿದೆ.
104.	ಬೀದರ್ ಜಿಪಂಇಂಉವಿ.ದಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಶ್ರೀಯುತರಾದ ಜಹೀರುದ್ದೀನ್ ಕಾಪಾಇಂ(ನಿ), ದೇವೇಂದ್ರಪ್ಪ, ಲೆ.ಅ., ಶ್ಯಾಮರಾವ್‌ಕಟ್ಟಿ, ಕ್ಯಾಶಿಯರ್, ಎನ್.ವಿ. ಮುಂಡರಗಿ, ಉಅ ಎನ್.ಎ. ಮಾನಕಾರಿ, ಸಇಂ ಹೆಚ್.ಪುಂಡಲೀಕ್, ಸಕಾಇಂ., ಗುರಣ್ಣ ಕೊಳ್ಳುರ, ನಿಕಾಇಂ.,ಕಾಶೀನಾಥ್, .ಸಕಾಇಂ, ಇವರುಗಳ ವಿರುದ್ಧ ಇಲಾಖಾ ವಿಚಾರಣೆ	ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿಗಳು ಸ್ವೀಕೃತವಾಗಿವೆ. ಈ ಪೈಕಿ ನಿವೃತ್ತರಾದ ಶ್ರೀ ಗುರಣ್ಣಕೊಳ್ಳೂರು ಮತ್ತು ಶ್ರೀ ಕಾಶಿನಾಥ್ ಇವರಿಗೆ ದಂಡನೆ ವಿಧಿಸುವ ಪ್ರಸ್ತಾವನೆಗೆ ಲೋಕಸೇವಾ ಆಯೋಗದ ಸಹಮತಿ ನೀಡಿದ್ದು, ಅದರಂತೆ ದಂಡನೆ ವಿಧಿಸಲಾಗಿದೆ. ಮತ್ತೊಂದು ವಿಚಾರಣಾ ವರದಿ (ಸೇವೆಯಲ್ಲಿರುವ ಆಪಾದಿತರ ಬಗ್ಗೆ) ವಿಚಾರಣಾಧಿಕಾರಿಗಳಿಂದ ಸ್ವೀಕೃತ

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
		ವಾಗಿದ್ದು ಅದನ್ನು ನಿಯಮ 11ಎ ಪ್ರಕಾರ ಸರ್ಕಾರ ಒಪ್ಪದೆ ಈ ಪ್ರಕರಣದಲ್ಲಿ ಮತ್ತೊಮ್ಮೆ ಇ.ವಿ. ನಡೆಸಲು ನಿರ್ಧಾರ ಕೈಗೊಂಡು ನಿವೃತ್ತ ನ್ಯಾಯಾಧೀಶರಾದ ಶ್ರೀ ಸೋಸಲ್ ಇಂದೂಧರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ದಿ. 28-7-04ರ ಆದೇಶದಲ್ಲಿ ನೇಮಿಸಲಾಗಿದೆ. ಈ ಮಧ್ಯೆ ಆಪಾದಿತರು ಕೆ.ಎ.ಟಿ.ಯಲ್ಲಿ ಅರ್ಜಿ ಸಲ್ಲಿಸಿ stay ತಂದಿರುತ್ತಾರೆ.
105.	ಜಿಪಂಇಂ ಉಪವಿಭಾಗ, ಗುಲ್ಬರ್ಗಾ ಇಲ್ಲಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಕೆಳಕಂಡವರ ವಿರುದ್ಧ ಮೊಹಮದ್ ಶಿರಾಜುದ್ದೀನ್ 1. ಹನುಮಂತರಾಯ, ಹಿಂ.ಸಕಾಪಾಇಂ 2.ಬಿ.ಎಸ್. ಐನಾಪುರ, ಹಿಂ.ಕಿ.ಇಂ 3.ಎಂ. ವೀರಭದ್ರಯ್ಯ, ಹಿಂ.ಸಕಾಪಾಇಂ 4.ಅಣ್ಣಾರಾವ್ ಭೂರ್ಜಣೆ, ಹಿಂಸಕಾಪಇಂ 5.ಪಿ.ವಿ. ಮಠ್, ಹಿಂ.ಸಕಾಪಾಇಂ 6.ಮೊಹಿನುದ್ದೀನ್ ಹಸನ್,ಹಿಂ.ಸಕಾಪಾಇಂ	ಇ.ವಿ. ನಡೆಸಲು ಆದೇಶ ಸಂ.ಗ್ರಾಅಪ 32 ಇಎನ್ಕ್ಯೂ 97 ದಿ.19-4-01ರಂದು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾಗಿದೆ. ಲೋಕಾಯುಕ್ತರಿಂದ ಇಲಾಖಾ ವಿಚಾರಣೆ ನಡೆಯುತ್ತಿದ್ದು, ವರದಿ ಬಂದಿಲ್ಲ. ಕಡೆ ಜ್ಞಾಪನಾ ಪತ್ರ ದಿ. 19-11-04

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
	7.ಎಸ್. ಜಿ.ರುದ್ರನಾಡಿ, ಹಿಂ.ಸಇಂ 8.ರಾಮಕೃಷ್ಣ,ಹಿಂ.ಸಇಂ 9.ಬಿ.ಮಲ್ಲಿಕಾರ್ಜುನ್ ,ಹಿಂ.ಸಕಾಪಾಇಂ 10.ಶಿವಣ್ಣ,ಹಿಂ.ಲೆಕ್ಕ ಅಧೀಕ್ಷಕರು 11.ಹಿರೇಮಠ್, ಹಿಂ.ಉ.ಅ. 12.ಬಸವರಾಜ್, ಕೆ.ತಕ್ಕಳಕಿ, ಹಿಂಇಂ(ಕಾಮಗಾರಿ ಉಸ್ತುವಾರಿಕೆ)ಇವರುಗಳ ವಿರುದ್ಧ ಇ.ವಿ. ಬಗ್ಗೆ	
106.	1996–97ನೇ ಸಾಲಿನಲ್ಲಿ ಚಿತ್ರದುರ್ಗ ಜಿಪಂಇಂವಿದಲ್ಲಿ ರೂ. 42,90,000 ಮತ್ತು ರೂ.1,22,50,000ಗಳ ಸಾಮಗ್ರಿಗಳನ್ನು ಕಾನೂನು ಬಾಹಿರವಾಗಿ ಖರೀದಿಸಿದ ಸಂಬಂಧ 1)ಎ.ಕೆ. ಸಿದ್ದಪ್ಪ, ತಾಂತ್ರಿಕ ಸಹಾಯಕ (ನಿ), 2) ಮೀರ್ ನಿಜಾಮುದ್ದೀನ್, ಕಾಪಾಇಂ, (ನಿ) ಇವರ ವಿರುದ್ಧ ಜಂಟಿ ಇ.ವಿ.,	ಇ.ವಿ. ನಡೆಸಲು ಆದೇಶ ಸಂ: ಗ್ರಾಅಪ 37 ಇಎನ್ಕ್ಯೂ 97 ದಿ.6–12–99ರಲ್ಲಿ ಜಿಲ್ಲಾಧಿಕಾರಿಗಳು, ಚಿತ್ರದುರ್ಗರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದ್ದು ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.
107.	ಹುನಗುಂದ ಜಿಪಂಇಂಉವಿ.ದಲ್ಲಿ ಕಾಮಗಾರಿಗಳ ಅನುಷ್ಟಾನದಲ್ಲಿ ಆಗಿರುವ ಅವ್ಯವಹಾರಕ್ಕೆ (ಅಂದಾಜು.ರೂ. 15.43 ಲಕ್ಷಗಳೂ) ಸಂಬಂಧಿಸಿದಂತೆ 1. ಬಿ.ಕೆ.ಪೂಜಾರ, ಸಕಾಪಾಇಂ	ಇವಿ ನಡೆಸಲು ಉ.ಕಾ(ಅ) ಜಿ.ಪಂ. ಬಿಜಾಪುರ ಇವರನ್ನು ವಿಚಾರಣಧಿಕಾರಿಗಳನ್ನಾಗಿ ನೇಮಿಸಲಾಗಿದೆ. ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
	2. ಜೆ.ಎಸ್. ಪಾಟೀಲ್, ಕಿಇಂ 3. ಎಸ್. ಬಿ.ಮೇಟಿ, ಕಿಇಂ, ವಿರುದ್ಧ ಜಂಟಿ ಇ.ವಿ.	
108.	ಹುಮ್ನಾಬಾದ್ ಉಪ ವಿಭಾಗದಲ್ಲಿ ಕಾಮಗಾರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ 1. ಹನುಮಂತಪ್ಪ ಕಾಪಾಇಂ.(ನಿ) 2. ಖಾಜಾ ಮಸೂದ್, ಸಇಂ 3. ಮೀರ್ ಸಾಬಿರ್ ಅಲಿಖಾನ್ ಸಇಂ ಇವರ ವಿರುದ್ಧ ಇ.ವಿ.	ಪ್ರಕರಣವನ್ನು ದಿ: 19–9–2000ದಂದುಉಪ ಲೋಕಾಯುಕ್ತರವರಿಗೆ ಇಲಾಖಾ ವಿಚಾರಣೆಗಾಗಿ ವಹಿಸಿದೆ. ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.
109.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗದ ವಿಭಾಗ, ಗದಗ ಮತ್ತು ಮುಂಡರಗಿಯಲ್ಲಿ ಜವಾಹರ್ ರೋಜಗಾರ್ ಯೋಜನೆ ಮತ್ತು ನಿರ್ಮಿತ ಯೋಜನೆಗಳಲ್ಲಿ ಆಗಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ 1)ಎಸ್.ಎ. ಸಜ್ಜನರ್, ಸಕಾಪಾಇಂ 2)ಎಲ್.ಆರ್. ರಾಘ, ಹಿಂಕಾಪಾಇಂ 3)ಸಿ.ಜಿ. ಶಲ್ಲಿಕೇರಿ, ಲೆಕ್ಕಾಧೀಕ್ಷಕರು 4)ಎ.ಕೆ. ಅರ್ಜುನಗಿ, ಸ.ಇಂ	ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957ರ ನಿಯಮ 11ರಡಿಯಲ್ಲಿನ ವಿಧಾನದಂತೆ ನಿಯಮ 13ರಡಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಅದೇ ನಿಯಮಗಳ 14(ಎ)ರನ್ವಯ ದಿ 7–6–01ರಂದು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿದೆ. ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
	5)ಎಸ್.ಎನ್. ಗಲಗಲಿ, ಕಿಇಂ 6)ಕೆ.ಚನ್ನಶೆಟ್ಟಿ, ಕಿಇಂ 7)ಹೆಚ್.ಬಿ.ದಡ್ಡಿ, ಕಿಇಂ ಇವರ ವಿರುದ್ಧ ಜಿ.ಇ.ವಿ	
110.	ವಿಶ್ವಬ್ಯಾಂಕ್ ಯೋಜನೆಯಡಿ ಕೈಗೊಳ್ಳಲಾದ ಸಮಗ್ರ ಗ್ರಾಮೀಣ ನೀರು ಸರಬರಾಜು ಯೋಜನೆ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸುವಲ್ಲಿ ಕರ್ತವ್ಯ ಲೋಪ ಎಸಗಿದ ಬಗ್ಗೆ ಶ್ರೀ ಎನ್.ಎಸ್. ಹೋಳಿಮಠ, ಕಾರ್ಯಪಾಲಕ ಇಂಜಿನಿಯರ್, ವಿಶ್ವಬ್ಯಾಂಕ್ ಯೋಜನೆ ಶಿವಮೊಗ್ಗ ಇವರ ಮೇಲೆ ಇ.ವಿ.	ಮುಖ್ಯ ಇಂಜಿನೀಯರ್ ಆರ್ ಡಿಇಡಿ ಇವರನ್ನು ದಿನಾಂಕ 5–2–01ರ ಆದೇಶದಲ್ಲಿ ವಿಚಾರಣಾಧಿಕಾರಿ ಯನ್ನಾಗಿ ನೇಮಿಸಲಾಗಿದ್ದು, ಅವರು ಸಲ್ಲಿಸಿದ್ದ ವಿ. ವರದಿಯನ್ನು ಪರಿಶೀಲಿಸಿ, ಆಪಾದಿತರಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಿತ್ತು. ಉತ್ತರ ಪರಿಶೀಲಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.
111.	ಎನ್. ಬಸವರಾಜು, ಅಂದಿನ ಸಕಾಇಂ ಜಿಪಂಇಂಉವಿ., ಕುಂದಗೋಳ ಇವರ ಅಸಮರ್ಪಕ ಕಾರ್ಯ ವೈಖರಿ ಇತ್ಯಾದಿ ಗಳ ಬಗ್ಗೆ	ಎನ್.ಬಸವರಾಜು, ಅಂದಿನ ಸಕಾಇಂ, ಜಿಪಂಇಂಉವಿ, ಕುಂದಗೋಳ ಇವರಿಗೆ ದಿ.24–1–2005ರ ಆದೇಶದಲ್ಲಿ ದಂಡನೆ ವಿಧಿಸಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
112.	ಹಾರನಹಳ್ಳಿ ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ಕೈಗೊಂಡ ನೀರು ಸರಬರಾಜು ಹಾಗೂ ನೈರ್ಮಲ್ಯ ಕಾಮಗಾರಿಗಳ ಅಸಮರ್ಪಕ ನಿರ್ವಹಣೆ ಹಾಗೂ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ 1.ಎನ್.ಎಸ್. ಹೋಳಿಮಠ, ನಿವೃತ್ತ ಕಾಇಂ. 2.ಹೆಚ್. ಎಂ. ಕೃಷ್ಣಮೂರ್ತಿ, ಸಕಾಇಂ(ನಿ) 3.ಎಂ. ಮೃತ್ಯುಂಜಯ, ಸಕಾಇಂ, 4. ವಿಜಯಕುಮಾರ್, ಸಇಂ 5.ಎ.ಬಿ.ಜಯಪ್ಪ, ಇವರುಗಳ ಮೇಲಿನ ಇಲಾಖಾ ವಿಚಾರಣೆ	ವಿಚಾರಣಾಧಿಕಾರಿಗಳಾದ ಶ್ರೀ ಎನ್. ಎಸ್. ಸಂಗೋಳ್ಳಿ ಇವರಿಂದ ವರದಿ ಬಂದಿದ್ದು, ಅದನ್ನು ಪರಿಶೀಲಿಸಲಾಗುತ್ತಿದೆ.
113.	ಶಿರಹಟ್ಟಿ ತಾ. ಸಿಗ್ಗಿ ಗ್ರಾ.ಪಂ.ಯಲ್ಲಿ 10ನೇ ಹಣಕಾಸು ಅನುದಾನದಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ 1. ಎಸ್.ಪಿ.ಮಠದ್, ಹಿಂದಿನ ಕಾರ್ಯದರ್ಶಿ, ಸಿಗ್ಗಿ ಗ್ರಾ.ಪಂ ಇವರ ವಿರುದ್ಧ ಇ.ವಿ.	ವಿಚಾರಣಾ ವರದಿಯಂತೆ ಆಪಾದಿತರಿಗೆ ದಂಡನೆ ವಿಧಿಸಲು ಪರಿಶೀಲಿಸಲಾಗುತ್ತದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
114.	ಲಂಚ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಶ್ರೀ ಪ್ರದೀಪ್ ವಿಠಲ ನಾಯಕ್, ಕಿ.ಇಂ, ತಾ.ಪಂ. ಹಳಿಯಾಳ ಇವರ ಮೇಲೆ ವಿಚಾರಣೆ ಬಗ್ಗೆ	ಮಾನ್ಯ ಲೋಕಾಯುಕ್ತ ಶಿಫಾರಸ್ಸಿನಂತೆ ಇಲಾಖಾ ವಿಚಾರಣೆ ನಡೆಸಲು ಸಿಸಿಎ ನಿಯಮಾವಳಿಗಳ ನಿಯಮ 14(ಎ)ರಂತೆ ಲೋಕಾಯುಕ್ತರಿಗೆ ವಹಿಸಲಾಗಿದೆ ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.
115.	ಹೈದರಾಬಾದ್ ಕರ್ನಾಟಕ ಪ್ರದೇಶಾ ಅಭಿವೃದ್ಧಿ ಯೋಜನೆಯಲ್ಲಿ ಮಂಜೂರಾದ ಸಮುದಾಯ ಭವನದ ಕಟ್ಟಡ ಕಾಮಗಾರಿಯಲ್ಲಿನ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಶ್ರೀಯುತರಾದ ಬಸವರಾಜ ಸಲಗರ, ಅಂದಿನ ಸಕಾಇಂ, ಶರಣಬಸಪ್ಪ, ಸ.ಇಂ. ಜಿಪಂ.ಇಂಉವಿ, ಅಫಜಲಪುರ ಇವರ ವಿರುದ್ಧ ಜಿ.ಇ.ವಿ	ಇ.ವಿ. ನಡೆಸಲು ಮುಕಾನಿ, ಜಿ.ಪಂ. ಗುಲ್ಬರ್ಗ ಇವರನ್ನು ದಿ. 13–2–03ರ ಆದೇಶದಲ್ಲಿ ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಇವರಿಂದ ಸ್ವೀಕೃತವಾಗಿರುವ ವಿಚಾರಣ ವರದಿಯನ್ನು ಪರಿಶೀಲಿಸಿ, ಆಪಾದಿತರಿಗೆ ದಿ. 1–12–03ರಂದು 2ನೇ ಕಾರಣ ಕೇಳುವ ನೋಟೀಸ್ ನ್ನು ಜಾರಿ ಗೊಳಿಸಲಾಗಿತ್ತು. ಸದರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಗಳ ಬಗ್ಗೆ ವಿಚಾರಣಾಧಿಕಾರಿಗಳ ಅಭಿಪ್ರಾಯ ಕೋರಲಾಗಿದೆ.
116.	ಶಿವಮೊಗ್ಗ ಜಿಪಂಇಂಉವಿ ದಲ್ಲಿ ಸರ್ಕಾರಕ್ಕೆ ಆದ ಆರ್ಥಿಕ ನಷ್ಟದ ಬಗ್ಗೆ ಕೆ. ಕಾಮೇಶ್ವರಚಾರ್, ಕಾಇಂ.(ನಿ), ಜಿಪಂ ಇಂಉವಿ, ಶಿವಮೊಗ್ಗ ಇವರ ಮೇಲಿನ ಇಲಾಖಾ ವಿಚಾರಣೆ	ಇ.ವಿ. ನಡೆಸಲು ನಿವೃತ್ತ ನ್ಯಾಯಾಧೀಶರಾದ ಶ್ರೀ.ಬಿ.ಎಲ್. ಶ್ರೀಕಂಠಯ್ಯ ಇವರನ್ನು ದಿ. 24–7–03ರ ಆದೇಶದಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅವರು ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದಾರೆ. ಆಪಾದಿತ ಅಧಿಕಾರಿಗೆ 2ನೇ ಕಾರಣ ಕೇಳುವ ನೋಟೀಸು ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
117.	1)ಎಂ.ಡಿ.ಹುರಳಿಕೊಪ್ಪಿ, ಕಾಇಂ 2)ಎನ್. ಬಸವರಾಜು, ಸಕಾಇಂ 3)ಎಂ.ಕೆ. ಗೋವಿಂದಣ್ಣನವರ, ಕಿಇಂ. ಇವರುಗಳು ಕುಂದಗೋಳ ತಾಲ್ಲೂಕು ಯರೆಬೂದಿಹಾಳ ಶಾಲಾ ಕಟ್ಟಡ ಕಳಪೆ ಕಾಮಗಾರಿ ಮಾಡಿದ್ದಾರೆಂಬ ಬಗ್ಗೆ	ಪ್ರಕರಣದಲ್ಲಿ ಇಲಾಖಾ ವಿಚಾರಣೆ ನಡೆಸಿ, ಆರೋಪ ಸಾಬೀತಾಗಿರುವುದರಿಂದ ದಿ. 26–1–05ರ ಆದೇಶದಲ್ಲಿ ಶ್ರೀ ಎಂ.ಕೆ. ಗೋವಿಂದಣ್ಣನವರ ಕಿಇಂ, ಇವರುಗಳಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಿದೆ. ಶ್ರೀ.ಎಂ.ಡಿ. ಹುರಳಿಕೊಪ್ಪಿ, ಕಾಇಂ(ನಿವೃತ್ತ) ಇವರಿಗೆ ದಂಡನೆ ವಿಧಿಸುವ ಬಗ್ಗೆ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಕೋರಲಾಗಿದೆ.
118.	ಶ್ರೀ ಪಿ.ವಿ. ಹಿರೇಮಠ, ಅಂದಿನ ಸಕಾಇಂ(ಪ್ರಸ್ತುತ ನಿವೃತ್ತ) ಜಿಪಂಇಂ ಉಪ ವಿಭಾಗ, ಗದಗ್ ಇವರ ಮೇಲಿನ ಇಲಾಖಾ ವಿಚಾರಣೆ ಬಗ್ಗೆ	ವಿಚಾರಣಧಿಕಾರಿಯವರಿಂದ ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.
119.	ಶ್ರೀ ಎಲ್. ವೆಂಕಟರಮಣಪ್ಪ ಮತ್ತು ಶ್ರೀ ಶೇಖರಗೌಡ, ಸಕಇಂ(ನಿವೃತ್ತ) ಇವರ ವಿರುದ್ಧ ಇಲಾಖಾ ವಿಚಾರಣೆ ಬಗ್ಗೆ	ಸದರಿ ನೌಕರರು ನಿವೃತ್ತಿಯಾಗಿರುವುದರಿಂದ ಇವರಿಂದ ಉಂಟಾದ ಆರ್ಥಿಕ ನಷ್ಟವನ್ನು ವಸೂಲು ಮಾಡಲು ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಮುಕಾನಿಅ, ಜಿಪಂ, ಶಿವಮೊಗ್ಗ ಇವರನ್ನು ಕೋರಲಾಗಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
120.	ದಿವಂಗತ ಖಾದರ್ ಪಾಶ ಅಂದಿನ ಕಿರಿಯ ಇಂಜಿನಿಯರ್, ಜಿಪಂಇಂಉವಿ, ಯಾದಗಿರಿ ಇವರ ಎಲ್.ಐ.ಸಿ. ಪಾಲಿಸಿಗಳು ಲ್ಯಾಪ್ಸ್ ಆಗಲು ಕಾರಣರಾದ ಶ್ರೀ ಕಾಮೇಶ್ವರಾಚಾರ್, ಅಂದಿನ ಕಾಇಂ, (ನಿ) 2)ಓದೋಗಂಗಪ್ಪ, ಸಕಾಇಂ, 3)ತಿಮ್ಮಬೋವಿ, ಅಂದಿನ ಪ್ರ.ದ.ಸ. 4)ಎನ್. ರಂಗಪ್ಪ ದ್ವಿ.ದ.ಸ. ಇವರ ಮೇಲಿನ ಇಲಾಖಾ ವಿಚಾರಣೆ ಬಗ್ಗೆ	ಈ ಪ್ರಕರಣವನ್ನು ಸಿಸಿಎ ನಿಯಮಾವಳಿಗಳ ನಿಯಮ 14(ಎ) ಲೋಕಾಯುಕ್ತರಿಗೆ ವಹಿಸಲಾಗಿದೆ. ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.
121.	ಶ್ರೀ ಎನ್. ವಿ. ಮುದಗಲ್, ಕಿ.ಇಂ.ತಾಲ್ಲೂಕು ಪಂಚಾಯತ್ ಶಿಗ್ಗಾಂವ ಇವರ ಮೇಲಿನ ಟ್ರ್ಯಾಪ್ ಪ್ರಕರಣದ ಬಗ್ಗೆ	ಲೋಕಾಯುಕ್ತರಿಂದ ವರದಿ ನಿರೀಕ್ಷಿಸಲಾಗುತ್ತಿದೆ.
122.	ಶ್ರೀ ಹೆಚ್.ಎಸ್. ಗುಡಿಸಲಮನಿ, ಕಿ.ಇಂ, ತಾಲ್ಲೂಕು ಪಂಚಾಯತ್, ರೋಣ ಇವರ ಅಕ್ರಮ ಸಂಭಾವನೆ ಬಗ್ಗೆ	ಈ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದೆ.
123.	ಶ್ರೀ ಕೆ.ಎ. ಅಧೋನಿ , ಸಕಾಇಂ ಇವರ ವಿರುದ್ಧ ಇಲಾಖಾ ವಿಚಾರಣೆ ಬಗ್ಗೆ	ಮುಕಾನಿಅ, ಜಿಪಂ. ಕಾರವಾರ ಇವರಿಂದ ವರದಿ ನಿರೀಕ್ಷಿಸಲಾಗುತ್ತಿದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
124.	ಶ್ರೀ ಜಿ. ರಾಮಪ್ಪ, ಕಿ.ಇಂ. ತಾ.ಪಂ. ಹಿರೆಕೆರೂರು ಇವರ ವಿರುದ್ಧ ಇಲಾಖಾ ವಿಚಾರಣೆ ಬಗ್ಗೆ	ಇಲಾಖಾ ವಿಚಾರಣೆ ಪೂರ್ಣಗೊಳಿಸಿ ಸದರಿ ಅಧಿಕಾರಿಯವರಿಗೆ ದಿ. 2–6–04 ರ ಆದೇಶದಲ್ಲಿ ದಂಡನೆ ವಿಧಿಸಿದೆ.
125.	1)ಬಿ.ಜಿ. ನಂದಿ, ಕಿ.ಇಂ 2)ಎಂ.ಬಿ.ರಾಜಶೇಖರ, ಸ.ಇಂ ಇವರುಗಳು ಮುಂಡರಗಿ ಜಿ.ಪಂ.ಇಂ. ಉಪವಿಭಾಗದಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ವಿಚಾರಣಾಧಿಕಾರಿಯವರಿಂದ ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದೆ.
126.	ಶ್ರೀ ಶಿವಕುಮಾರ್ ಗಾಯತೊಂಡೆ, ಸಕಾಇಂ, ಜಿ.ಪಂ. ಇಂ ಉಪವಿಭಾಗ, ಬಾಲ್ಕಿ ಇವರ ಮೇಲಿನ ವಿಚಾರಣೆ ಬಗ್ಗೆ	ಸದರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಹೂಡಲು ದೋಷಾರೋಪಣಾ ಪಟ್ಟಿ ಕಳುಹಿಸಿ ಕೊಡುವಂತೆ ಮುಕಾನಿಅ, ಜಿಪಂ, ಬೀದರ್ ಇವರನ್ನು ಕೋರಿದೆ.
127.	1)ಕೃಷ್ಣಪ್ಪ, ಸಕಾಇಂ 2) ಶರಣಯ್ಯ, ದ್ವಿದ.ಸ. ಇವರು ಗುಲ್ಬರ್ಗಾ ಯಾಂತ್ರಿಕ ಉಪ ವಿಭಾಗದಲ್ಲಿ ಅವ್ಯವಹಾರ ಮಾಡಿದ್ದಾರೆಂಬ ಬಗ್ಗೆ	ವಿಚಾರಣಾಧಿಕಾರಿಯವರ ವರದಿಯಂತೆ 2ನೇ ಕಾರಣ ಕೇಳುವ ನೋಟೀಸು ಜಾರಿ ಮಾಡಿ ಲಿಖಿತ ಉತ್ತರ ಪಡೆದು ಅಂತಿಮ ಆದೇಶ ಮಾಡುವ ಬಗ್ಗೆ ಪರಿಶೀಲನೆಯಲ್ಲಿರುತ್ತದೆ.

ಕ್ರ ಸಂ.	ಅವ್ಯವಹಾರಕ್ಕೆ ಸಂಬಂಧಪಟ್ಟ ವಿವರ	ಕೈಗೊಂಡ ಕ್ರಮ
128.	ಶ್ರೀ. ಕೆ.ಟಿ. ತಿಮ್ಮಪ್ಪ, ಸಕಾಇಂ, ಜಿ.ಪಂ.ಇಂ. ಉಪವಿಭಾಗ, ಶಿವಮೊಗ್ಗ ಇವರ ಮೇಲೆ ಇಲಾಖಾ ವಿಚಾರಣೆ ಬಗ್ಗೆ	ಸದರಿ ಪ್ರಕರಣದಲ್ಲಿ ಆಪಾದಿತರ ವಿರುದ್ಧ ಶಿಸ್ತುಕ್ರಮ ಹೂಡಿ, ಆರೋಪಿತರಿಗೆ ಕಾರಣ ಕೇಳುವ ನೋಟೀಸು ಜಾರಿ ಮಾಡಿ, ಲಿಖಿತ ಹೇಳಿಕೆ ಪಡೆದು ಮುಂದಿನ ಕ್ರಮದ ಬಗ್ಗೆ ಪರಿಶೀಲನೆಯಲ್ಲಿರುತ್ತದೆ.
129.	1)ವಿ.ಸಿ.ಜೋಷಿ, ಉಗ್ರಾಣ ಅಧೀಕ್ಷಕರು 2)ಎನ್. ಹಿರೇಮಠ, ಉಗ್ರಾಣ ಅಧೀಕ್ಷಕರು 3)ನಾರಾಯಣಹುಡಗಿ, ದ್ವಿ.ದ.ಸ. 4) ಬಸವರಾಜ ಮಾಕೋಡ, ದ್ವಿ.ದ.ಸ.ಇವರುಗಳು ಗುಲ್ಬರ್ಗಾ ಜಿಪಂಇಂ ವಿಭಾಗದ ಉಗ್ರಾಣದಲ್ಲಿ ಸಾಮಾಗ್ರಿಗಳ ಕೊರತೆ ಉಂಟುಮಾಡಿದಾರೆಂಬ ಬಗ್ಗೆ	ಈ ಪ್ರಕರಣದಲ್ಲಿ ಮುಕಾನಿಅ, ಜಿಪಂ, ಗುಲ್ಬರ್ಗಾ ಇವರಿಂದ ವರದಿ ನಿರೀಕ್ಷಿಸಲಾಗುತ್ತಿದೆ.

ಪ್ರಶ್ನೆ ಸಂಖ್ಯೆ: 3490–ಶ್ರೀ ಎಸ್. ರಾಜೇಂದ್ರನ್

ಉತ್ತರ ಒದಗಿಸಲಾಗಿದೆ.

ಶ್ರೀ ಎಸ್. ರಾಜೇಂದ್ರನ್: ಅಧ್ಯಕ್ಷರೇ, ಜಿಲ್ಲಾ ಪಂಚಾಯ್ತಿದು ಕೇಳಿದ್ದರೆ ಇವರು ತಾಲ್ಲೂಕು ಪಂಚಾಯೀದು ಕೊಟ್ಟಿದ್ದಾರೆ. ಪುಟ 10ರಲ್ಲಿ 206.9ಲಕ್ಸ್ ತಾಲೂಕು ಪಂಚಾಯ್ತೀ ಅಂತ ಕೊಟ್ಟಿದ್ದೀರಿ, ನಾನು ಕೇಳಿದ್ದುದು ಜಿಲ್ಲಾ ಪಂಚಾಯ್ತಿದು ಇರಲಿ ಪರವಾಗಿಲ್ಲ.

ಉಪಾಧ್ಯಕ್ಷರು: ನಿಮ್ಮ ಹಣೆಬರಹವೇ ಸರಿ ಇಲ್ಲ ರಾಜೇಂದ್ರನ್, ಯಾವಾಗಲೂ ನಿಮ್ಮ ಪ್ರಶ್ನೆಗಳನ್ನು ಯದ್ವಾತದ್ವಾ ಆಗಿಬಿಡುತ್ತವೆ.

ಶ್ರೀ ಎಸ್. ರಾಜೇಂದ್ರನ್ : ಸರ್ಕಾರವೇ ಸರಿ ಇಲ್ಲ ಏನು ಮಾಡುವುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸರ್ಕಾರದ ಹಣೆಬರಹ ಇಷ್ಟೆ: ಫಾರಿನ್ ಸಿಕ್ ಅಂತ ಬಂದರೆ ಅದಕ್ಕೆ ಸೈನ್ ಮಾಡಿ ಕಳಿಸುತ್ತೀರಿ. ಜಿಲ್ಲಾ ಪಂಚಾಯ್ತಿದು ಕೇಳಿದರೆ ತಾಲೂಕು ಪಂಚಾಯ್ತಿ ಕಳಿಸುತ್ತೀರಿ. ಯಾರ ಹಣೆಬರಹ? ನಮ್ಮ ಹಣೆಬರಹವೋ ಅವರ ಹಣೆಬರವೋ?

ಶ್ರೀ ಜೆ.ಸಿ. ಮಾಧುಸ್ವಾಮಿ: ಇದನ್ನೆಲ್ಲ ಸಹಿಸುವುದು ನಿಮ್ಮ ಹಣೆಬರಹ

ಶ್ರೀ ಎಸ್. ರಾಜೇಂದ್ರನ್: ನಮ್ಮದೆಲ್ಲರದೂ ಸೇರಿ ಇರಲಿ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು ಆಗಲೀ ಏನೋ ನಿಮ್ಮ ಟೈಂ ಚೆನ್ನಾಗಿಲ್ಲಪ್ಪ ಐದು ವರ್ಷ ನಡೆದುಕೊಂಡು ಹೋಗಲಿ ಅಂತ.

ಉಪಾಧ್ಯಕ್ಷರು: ಅದಕ್ಕೆ ರಾಜೇಂದ್ರನ್ ನಿಮ್ಮ ಪ್ರಶ್ನೆ ಕೊನೆಗೆ ಇಟ್ಟುಕೊಂಡಿದ್ದೇವೆ.

ಶ್ರೀ ಎಸ್. ರಾಜೇಂದ್ರನ್: ಅಧ್ಯಕ್ಷರೇ, ಜಿಲ್ಲಾ ಪರಿಷತ್ತಿನಲ್ಲಿ ಏನೇನು ತಪ್ಪು ಮಾಡಿದ್ದಾರೋ ಯಾವುದನ್ನು ಬಹಳ ಕ್ಲಿಯರಾಗಿ ಕೊಟ್ಟಿದ್ದೀರೋ ತಾವು ಸಿಂಪಲಾಗಿ ಕೊಟ್ಟಿದ್ದೀರಿ, ಶಿಸ್ತುಕ್ರಮ ಜರುಗಿಸುತ್ತೇವೆ ಅಂತ. ನಮ್ಮ ಜಿಲ್ಲೆಗೆ 4 ತಿಂಗಳಾಗಿದೆ ಸಿಇಓ ಬಂದು, ಯಾರ ಮೇಲೆ ಕ್ರಮ ಕೈಗೊಳ್ಳುವಿರಿ? ಅಲ್ಲಿ ಸಿಇಓ ಇಲ್ಲ. ಈಗ ಅವರು ತಪ್ಪು ಮಾಡಿದ್ದಾರಲ್ಲ ಏನು ಮಾಡುವುದು? ಒಬ್ಬ ಕ್ಲರ್ಕ್‌ನ್ನು ಸಸ್ಪೆಂಡ್ ಮಾಡಿದ್ದೀರಿ, ತಪ್ಪು ಅದು. ಸರಿಯಾಗಿ ನೀವು ಮಾಡಲಿಲ್ಲ. ಎರಡನೆಯದು ಜಿಲ್ಲಾ ಪಂಚಾಯ್ತಿಯಿಂದ ಎಸ್ ಜೆ ಆರ್ ವೈನಲ್ಲಿ ಐದೂವರೆ ಕೋಟಿ ಮಾಡಬೇಕು ಅಂತ, ಅದ ರಲ್ಲಿ ಸ್ಪಿಲ್ ಓವರ್ ಎರಡೂವರೆ ಕೋಟಿ, ಜೊತೆಗೆ ಎಂಪಿಗೆ ಒಂದೂವರೆ ಕೋಟಿ ಹೋಗಬೇಕು. ಆಗ ಉಳಿದಿರುವುದು ಒಂದೂವರೆ ಕೋಟಿ. 13 ಕೋಟಿಗೆ

ಅವರು ಪ್ರಾಜೆಕ್ಟ್ ಮಾಡಿದ್ದಾರೆ. ಇದು ತಪ್ಪು ತಾನೆ? ಅಂತಹ ಅಧಿಕಾರಿಯನ್ನು Have you suspended him? Have you taken disciplinary action against him? ನಾವು ಅದನ್ನು ಸರಿಪಡಿಸುತ್ತೇವೆ. ವಿಚಾರಣೆ ಮಾಡಿಸುತ್ತೇವೆ ಎಂದಿದ್ದೀರಿ, ಯಾಕೆ ವಿಚಾರಣೆ ಮಾಡುವಿರಿ, suspend him. Throw him out.ಯಾಕೆ ಮಾಡಲಿಲ್ಲ?

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ: ನಮ್ಮ ಕೋಲಾರ ಜಿಲ್ಲಾ ಪಂಚಾಯ್ತಿಯಲ್ಲಿ ನಿರ್ಣಯ ಆಗಿದೆ; ಅವ್ಯವಹಾರಗಳ ಬಗ್ಗೆ ತನಿಖೆಯಾಗಬೇಕು ಅಂತ. ಅದಾಗಿ ವರ್ಷಗಟ್ಟಲೆ ಆಯಿತು. ಆದರೆ ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಏನೂ ಅವ್ಯವಹಾರ ನಡೆದೇ ಇಲ್ಲ ಎನ್ನುವಂತೆ ಇಲ್ಲಿ ಉತ್ತರ ಕೊಟ್ಟಿದ್ದಾರೆ; 10ನೇ ಪುಟದಲ್ಲಿ ಕೋಲಾರ ಜಿಲ್ಲೆಯದು ಕೊಟ್ಟಿರುವುದರಲ್ಲಿ ಬರೀ ಮಾಲೂರು ತಾಲ್ಲೂಕು, ಶ್ರೀನಿವಾಸಪುರದ್ದೊಂದು ಮುಳಬಾಗಿಲದ್ದೊಂದು ಎಂದು ಕೊಟ್ಟಿದ್ದಾರೆ. ಜಿಲ್ಲಾ ಪಂಚಾಯ್ತಿಯಲ್ಲಿ ನಿರ್ಣಯವಾಗಿದೆ ಅವ್ಯವಹಾರ ತನಿಖೆಯಾಗಬೇಕು ಅಂತ. ಇನ್ನು ಒಂದು ಉದಾ ಹರಣೆ ನಿಮಗೆ ಹೇಳಬೇಕಾದರೆ 5 ಕೋಟಿ ರೂ. ಅವ್ಯವಹಾರವಾಗಿದೆ. ಎಸ್ ಸಿಆರ್ ವೈನಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯರ ಕೋಟ ಅಂತ 50 ಸಾವಿರ ಕೊಡು ತ್ತಾರೆ. ಮಿಡ್ಡೆಮರಿ ಹೋಬಳಿಗೆ 12 ಕೋಟಿ ಮಂಜೂರು ಮಾಡಿ ಕಳುಹಿಸುತ್ತಾರೆ; ಅಧ್ಯಕ್ಷರು ಡಿಸ್ಕ್ರಿಷನರಿ ಗ್ರಾಂಟ್, ಡಿಸ್ಕ್ರಿಷನರಿ ಗ್ರಾಂಟ್ ಒಂದು ಹೋಬಳಿಗೆ 12 ಲಕ್ಷ ಜಿಲ್ಲಾ ಪಂಚಾಯ್ತಿ ಸದಸ್ಯರಿಗೆ 50 ಸಾವಿರ. ಇದನ್ನು ಅವ್ಯವಹಾರ ಎನ್ನುತ್ತೀರೋ ವ್ಯವಹಾರ ಎನ್ನುತ್ತೀರೋ ಏನೆಂದು ಹೇಳುತ್ತೀರಿ? ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಆಗಿರುವ 5 ಕೋಟಿ ರೂ. ಅವ್ಯವಹಾರಕ್ಕೆ ತನಿಖೆಯಾಗಬೇಕೆಂಬು ಹೇಳಿ ಜಿಲ್ಲಾ ಪಂಚಾಯಿತಿಯಲ್ಲಿ ರೆಸಲ್ಯೂಷನ್ ಆಗಿದೆ. ಇಲ್ಲಿ ಬಂದು ನೋಡಿದರೆ ಏನೂ ಏನೂ ಕೊಟ್ಟಿಲ್ಲ, ಏನೂ ಆಗಿಲ್ಲವೆಂದು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಏನೂ ಅವ್ಯವಹಾರ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಎರಡು ವರ್ಷದಲ್ಲಿ ಎರಡು ಅಥವಾ ಮೂರು ಮೀಟಿಂಗ್ ನಡೆದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ಪ್ರಶ್ನೆ ಇದಕ್ಕೆ ಉತ್ತರ ಸಿಕ್ಕಿ ಈ ಅವ್ಯವಸ್ಥೆ ಸರಿಹೋಗಬೇಕೆನ್ನುವ ಉದ್ದೇಶದಿಂದ ಕೇಳುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ನಾನು ಕುಳಿತುಕೊಂಡು ಜಿಲ್ಲಾ ಪರಿಷತ್ತಿನಲ್ಲಿ ಮೂವ್ ಮಾಡಿದ್ದೇವೆ. ಅಲ್ಲೇನು ಬಿಲ್ ಕಲೆಕ್ಟರ್‌ಗಳನ್ನು ಪ್ರಮೋಷನ್ ಮಾಡಿದ್ದೀರಿ, ನೀವು ಪಕ್ಷಭೇದ ಮಾಡಿದ್ದೀರಿ, ಸೀನಿಯಾರಿಟಿ ಓವರ್

ಲುಕ್ ಮಾಡಿದ್ದೀರಿ, ಹಣ ತೆಗೆದುಕೊಂಡು ನೀವು ಪ್ರಮೋಷನ್ ಮಾಡುತ್ತೀರಿ ಎಂದು ನಾನು ಜಿಲ್ಲಾ ಪರಿಷತ್ ಸಭೆಯಲ್ಲಿ ನಾನೆ ರೆಕಾರ್ಡ್ ಸಹಾ ಮಾಡಿಸಿದ್ದೇನೆ. ಇವತ್ತಿನವರೆಗೂ ತನಿಖೆಯಾಗಿಲ್ಲ. ಅಲ್ಲಿ ಯಾವ ಅವ್ಯವಹಾರವೂ ಇಲ್ಲವೆಂದು ನೀವು ಹೇಳುತ್ತೀರಿ. ಎರಡನೆಯದು, ನನ್ನ ಕ್ಷೇತ್ರದಲ್ಲಿ ಬಿಳಿಗೆರೆ ಎಂದು ತಿಪಟೂರು ತಾಲ್ಲೂಕಿನಲ್ಲಿ ಒಬ್ಬ ಸೆಕ್ರೆಟರಿ, ಬರೆದುಕೊಟ್ಟಿದ್ದಾನೆ. ಏಳು ನೂರು ಚೀಲ ಅಕ್ಕಿಯನ್ನು ತೆಗೆದುಕೊಂಡು ಹೋಗಿ ಪಂಚಾಯಿತಿಯಲ್ಲಿ ಐದುನೂರು ಚೀಲಕ್ಕೆ ರೆಸಿಟ್ ಮಾಡಿ ಇನ್ನು ಎರಡುನೂರು ಚೀಲವನ್ನು ನಾನು ದುರ್ವ್ಯವಹಾರ ಮಾಡಿದ್ದೇನೆ ಎಂದು ಬರೆದುಕೊಟ್ಟು ತಿಪಟೂರು ತಾಲ್ಲೂಕು ಪಂಚಾಯಿತಿಯು ರೆಸಲ್ಯೂಷನನ್ನು ಪಾಸ್ ಮಾಡಿ ಕಳಿಹಿಸಿದೆ. ನಿಮ್ಮ ಚೀಫ್ ಸೆಕ್ರೆಟರಿ, ಸಿಇಓ ಜಿಲ್ಲಾ ಪಂಚಾಯತ್ ವೇವ್ ಮಾಡಿದ್ದೇನೆಂದು ಬರೆಯುತ್ತಾರೆ. ಎಷ್ಟು ಜನ ನಿಮ್ಮ ಸಿಇಓಗಳು ಇವತ್ತು ಸರಿಯಾಗಿ ಕೆಲಸವನ್ನು ಮಾಡುತ್ತಿದ್ದಾರೆ, ಎಷ್ಟು ಜನ ನಿಮ್ಮ ಎಷ್ಟು ಜನ ಅಧಿಕಾರಿಗಳನ್ನು ಶೀಲ್ಡ್ ಮಾಡುತ್ತಿದ್ದಾರೆನ್ನುವ ಬಗ್ಗೆ ನೀವು ತನಿಖೆಯನ್ನು ಮಾಡಿಸಬೇಕು. ನಾನೊಂದು ಅವರಿಗೆ ಛಾಲೆಂಜ್ ಪ್ರೂವ್ ಮಾಡುತ್ತೇನೆ, ತರಿಸಿಕೊಳ್ಳಿ ಇವತ್ತು ತಿಪಟೂರು ಟಿಪಿ ಎಸ್ ನಿಂದ ಟಿಪಿಎಸ್‌ನಲ್ಲಿ ರೆಸಲ್ಯೂಷನ್ ಆಗಿದೆ. ಟಿಪಿಎಸ್ ನಲ್ಲಿ ಅವನು ಒಪ್ಪಿ ಕೊಂಡಿದ್ದಾನೆ. ಸಿಇಓಯಿಂದ ಹಿಡಿದು ತನಿಖೆ ಕೂಡ ಆಗಿದೆ. ಉದಿಬದಿ ಸ್ಕೀಮ್ ನಲ್ಲಿ ಎಲ್ಲಾ ಸೆಕ್ರೆಟರಿಗಳು ದುಡ್ಡು ತಿಂದು ಹಾಕಿದ್ದಾರೆ. ಅಕ್ಕಿಯನ್ನು ಯಾರು ಸರಿಯಾಗಿ ವಿತರಣೆ ಮಾಡಿಲ್ಲ ಎಂದು ಹೇಳಿ, ಚಿಕ್ಕನಾಯಕನಹಳ್ಳಿ, ತಿಪಟೂರು, ಗುಬ್ಬಿ ಆ ಭಾಗದಲ್ಲಿ ಎಲ್ಲಾ ಸೆಕ್ರೆಟರಿಗಳನ್ನೂ ಛಾರ್ಜ ಮಾಡಿದ್ದೇವೆ. ಇಷ್ಟೇಷ್ಟೇ ಕ್ವಿಂಟಾಲ್ ರೈಸನ್ನು ತಿಂದಿದ್ದೀರಿ ಎಂದು ಹೇಳಿ ಒಪ್ಪಿಸಿದ್ದೀವಿ, ನೀವೇನು ತುಮಕೂರು ಜಿಲ್ಲೆಯಲ್ಲಿ ಇಲ್ಲವೇ ಇಲ್ಲ ಎಂದು ಅಸೆಂಬ್ಲಿಗೆ ಉತ್ತರ ಕೊಟ್ಟರೆ ಏನಾಗಬೇಕು? ನಾನು ತಮಗೆ ಸ್ಪಷ್ಟವಾಗಿ ಕೇಳುವುದಕ್ಕೆ ಬಯಸುತ್ತೇನೆ, ನೀವು ರೆಕಾರ್ಡ್ ಮಾಡಿಕೊಳ್ಳಬೇಕು. ಬಿಳಿಗೆರೆಯಲ್ಲಿ ಇಡೀ ಗ್ರಾಮಸ್ಥರು ಬಿಳಿಗೆರೆ ಪಂಚಾಯಿತಿಗೆ ಬೀಗ ಹಾಕಿ ಎರಡು ನೂರು ಕ್ವಿಂಟಾಲ್ ರೈಸ್ ನ್ನು ತಂದಿಲ್ಲ ಎಂದಿದ್ದನ್ನು ಟಿಪಿಎಸ್ ಎನ್‌ಕ್ವೈರಿ ಮಾಡಿ ಪ್ರೂವ್ ಮಾಡಿರುವುದನ್ನು ತುಮಕೂರಿನಲ್ಲಿ ಯಾವುದೂ ಎನ್‌ಕ್ವೈರಿ ಪೆಂಡಿಂಗ್ ಇಲ್ಲ ಎಂದು ತಾವು ಬರೆಯುತ್ತೀರಿ. you must take action against the CEO who has shileded the Secretary. ತಾವು ಯಾವತ್ತು ನಮಗೆ ಮಾಹಿತಿಯನ್ನು ತರಿಸಿಕೊಡುತ್ತೀರಿ ಎಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೇ, ಯಾವ ಅಧಿಕಾರಿಗಳು ಇಷ್ಟೆಂದು ಭ್ರಷ್ಟಾಚಾರ ಹಗರಣದಲ್ಲಿದ್ದರೂ ಸಹಾ ಸರಿಯಾದ ವರದಿ ಕೊಡದೆ ಈ ತರಹ ಉತ್ತರ ಕೊಟ್ಟಿದ್ದಾರೆ. ಅವರ ಮೇಲೆ ಏನು ಕಮವನು. ತೆಗೆದುಕೊಳುತೀರಿ?

ಇದು ಮೊದಲನೆಯದು, ಎರಡನೆಯದು, ಯಾವ ಯಾವ ಪ್ರಕರಣದಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ. ಅದು ಯಾವ ಯಾವ ಅವಧಿಗೆ ಸಂಬಂಧಿಸಿದ್ದು ಎಂದು ನೀವೆಲ್ಲೂ ಹೇಳುತ್ತಿಲ್ಲ. ಮೂರನೆಯದು, ನಮ್ಮ ಶಿವಮೊಗ್ಗದಲ್ಲಿ ಜಿಲ್ಲಾ ಪಂಚಾಯಿತಿ ಕೆ. ರಾಮೇಶ್ವರಚಾರ್ ಕಾರ್ಯಪಾಲಕ ಇಂಜಿನಿಯರ್ ಅವರು, ಇವರ ಬಗ್ಗೆ ಪುಟ 16 ರಲ್ಲಿ ಏನು ಹೇಳಿದ್ದೀರಿ ಸ್ವಾಮಿ? ನಿವೃತ್ತ ನ್ಯಾಯಾಧೀಶರಾದ ಶ್ರೀ ಬಿ.ಎಲ್. ಶ್ರೀಕಂಠಯ್ಯ ಇವರನ್ನು ದಿ. 24-7-2003ರ ಆದೇಶದಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅವರು ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದಾರೆ. ಅಪಾದಿತ ಅಧಿಕಾರಿಗೆ ಎರಡನೇ ಕಾರಣ ಕೇಳುವ ನೋಟಿಸು ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಅವರನ್ನು ನೇಮಕ ಮಾಡಿದ್ದು 24-7-2003ರಲ್ಲಿ ಅವರು ಯಾವಾಗ ವರದಿಯನ್ನು ಕೊಟ್ಟರು ಎಂದು ನೀವು ಹೇಳುವುದಕ್ಕೆ ರೆಡಿ ಇಲ್ಲ. ಎರಡನೇ ಒಂದು ನೋಟಿಸನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಿ. ಎರಡನೇ ನೋಟಿಸನ್ನು ಕೊಟ್ಟಿಲ್ಲ. ಅದರ ಬಗ್ಗೆ ವ್ಯವಸ್ಥಿತವಾಗಿ ನಾನು ಇಲ್ಲಿ ಹತ್ತು ಪೇಜ್ ಹೇಳಬಲ್ಲೆ. ಅಂದರೆ ಈ ಲೂಟಿ ಮಾಡಿದವರನ್ನು ತನಿಖೆ ಮಾಡುವುದಕ್ಕೆ ಆ ಲೂಟಿ ಮಾಡಿದ್ದಕ್ಕೆ ಬೆಂಬಲ ಕೊಡುವಂಥ ಅಧಿಕಾರಿಗಳನ್ನು ನೀವು ನೇಮಿಸಿದ್ದೀರಿ. ಅದು ಒಬ್ಬ ಕೋರ್ಟಿನ ನಿವೃತ್ತ ನ್ಯಾಯಧೀಶರನ್ನು ನೇಮಕ ಮಾಡಿದ ಮೇಲೆ ಅಂಥ ಪ್ರಕರಣದಲ್ಲಾದರೂ ಅದು ತುದಿ ಮುಟ್ಟಿಸುವುದಿಲ್ಲವೆನ್ನುವುದಾದರೆ ಇದೇನು? ಅಧಿಕಾರಿಗಳು, ಸರ್ಕಾರ ಭ್ರಷ್ಟತೆ ಮಾಡುವ, ಲೂಟಿ ಮಾಡುವವರಿಗೆ ಶಾಮೀಲಾಗಿದೆ, ಇದರ ಅರ್ಥ ಇನ್ನೇನು ಬರುತ್ತದೆ. ಈ ರೀತಿ ಸದನದಲ್ಲಿ ಒಂದು ಪ್ರಶ್ನೆಗೆ ಇದು ಯಾವ ಅವಧಿಯದು? ಎಷ್ಟು ಹಣ ದುರುಪಯೋಗವಾಗಿದೆ? ಅಧಿಕಾರ ವಿಕೇಂದ್ರಿಕರಣದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಒಂದು ಕಡೆ ಕೆಲವು ಅಧಿಕಾರಿಗಳನ್ನು ಬಲಿ ಹಾಕುತ್ತಿದ್ದರೆ ಆಗ ಗ್ರಾಮ ಪಂಚಾಯಿತಿ ಸದಸ್ಯರು ಯಾರೋ ಅಧ್ಯಕ್ಷರಾಗಿ ಬಂದವರು ಏನು ಮಾಡಬೇಕು? ಯಾವುದೇ ಅಧಿಕಾರಿಗೆ ಭಯ ಇಲ್ಲದಿದ್ದರೆ. ಬಿಜಾಪುರ ಜಿಲ್ಲೆ ಬಗ್ಗೆ ನೋಡಿ. ಒಂದು ಆರು ಲಕ್ಷ, ಇನ್ನೊಂದು ಏಳು ಲಕ್ಷ ಚಿಲ್ಲರೆ ಗ್ರಾಮ ಪಂಚಾಯಿತಿಯಲ್ಲಿ ತಿಂದು ಬಿಟ್ಟಿದ್ದಾನೆ. ಐದು ವರ್ಷ ಪೂರ್ತಿ ಅಷ್ಟು ಹಣವನ್ನು ಅವನು ಅಭಿವೃದ್ಧಿ ಕಾರ್ಯಕ್ಕೆ ಕೊಟ್ಟಿಲ್ಲ. ಅಧಿಕಾರಿಗಳು ಕೊಟ್ಟ ಉತ್ತರವನ್ನು ತಂದು ಇಲ್ಲಿ ಇಟ್ಟುಬಿಡುತ್ತೀರಿ ಎನ್ನುವುದಾದರೆ ಇದನ್ನು ಏನು ಹೇಳಬೇಕು ಸ್ವಾಮಿ. ತಾವೇನು ಹೊಸದಾಗಿ ಸಚಿವರಾಗಿಲ್ಲ. ಹಳಬರಿದ್ದೀರಿ. ನಿಮಗೆ ಅನುಭವ ಇದೆ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಉಪಾಧ್ಯಕ್ಷರೇ, ಅದೇ ತರಹ ನಮ್ಮ ಉಡುಪಿ ಜಿಲ್ಲೆಯಲ್ಲಿ ಯಾವುದೇ ಪ್ರಕರಣವಾಗಲಿಲ್ಲವೆಂದು ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ರಾಜೇಂದ್ರನ್ ಅವರೇ, ನಿಮ್ಮ ಪ್ರಶ್ನೆ ಮುಗಿಯಿತಾ? ಮತ್ತೆ ನೀವು ಮುಗಿಸಿ. ಎಲ್ಲ ಒಂದೇ ಸಾರಿ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ರಾಜೇಂದ್ರನ್: ಅವರು ಉತ್ತರ ಕೊಟ್ಟಿಲ್ಲ. ಆ ನಂತರ ಉಪ ಪ್ರಶ್ನೆ ಕೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಇದು ರಾಜೇಂದ್ರನ್ ಅವರ ಪ್ರಶ್ನೆ. ಅವರು ಮುಗಿಸಿಬಿಡಲಿ.

ಶ್ರೀ ಎಸ್. ರಾಜೇಂದ್ರನ್: ಉತ್ತರವನ್ನು ಅವರು ಕೊಡಲಿ. ಆಮೇಲೆ ಸಬ್ ಕ್ವಶ್ಚನ್ ಅನ್ನು ಕೇಳುತ್ತೇನೆ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಉಪಾಧ್ಯಕ್ಷರೇ, ಉಡುಪಿ ಜಿಲ್ಲೆಯಲ್ಲಿ ಯಾವುದೇ ಪ್ರಕರಣ ವರದಿ ಆಗಲಿಲ್ಲವೆಂದು ಹೇಳಿದ್ದಾರೆ. ಐದು ಕೋಟಿ ಹಗರಣವಾದದ್ದು ಜಿಲ್ಲಾ ಪಂಚಾಯಿತಿಯಿಂದ ರೆಸಲ್ಯೂಷನ್ ಆಗಿ ಬಂದಿದೆ. ಐದು ಜನರು ಸಸ್ಪೆಂಡ್ ಆಗಿದ್ದಾರೆ. ಮತ್ತೆ ಒಬ್ಬರು ಇಂಜಿನಿಯರ್ ಟ್ರೆಜರಿಗೆ ಹಣವನ್ನು ವಾಪಸ್ ಕಟ್ಟಿದ್ದಾರೆ. ಇಲ್ಲಿ ತಾವು ಯಾವುದೇ ಉಡುಪಿ ಜಿಲ್ಲೆಯಲ್ಲಿ ಪಂಚಾಯಿತಿಯಲ್ಲಿ ಹಗರಣಗಳಾಗಿಲ್ಲ ಎಂದು ಬಂದಿದೆ. ಜಿಲ್ಲಾ ಪಂಚಾಯಿತಿಯವರೇ ಐದು ಕೋಟಿ ರೂಪಾಯಿ ಹಗರಣವಾಗಿದೆ ಎನ್ನುವುದನ್ನು ಒಪ್ಪಿಕೊಂಡು ಹೇಳಿದ್ದಾರೆ. ಇಲ್ಲಿ ತಪ್ಪು ಮಾಹಿತಿ ಬಂದಿದೆ.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜೇಂದ್ರನ್ ಅವರು ಪ್ರಶ್ನೆ ಕೇಳಿರುವುದು. ರಾಜ್ಯದಲ್ಲಿರುವ ಯಾವ ಯಾವ ಜಿಲ್ಲಾ ಪಂಚಾಯತ್‌ಗಳಲ್ಲಿ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದ್ದಾರೆ. ಈ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಈವರೆಗೆ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗೆ ಹಣ ದುರುಪಯೋಗ, ಅಧಿಕಾರ ದುರುಪಯೋಗ, ಕಾನೂನು ಚಟುವಟಿಕೆಗಳು ಈ ರೀತಿ 307 ಪ್ರಕರಣಗಳು ನಡೆದಿವೆ. ಈ ಮೂರು ಸಂಸ್ಥೆಗಳಿಂದ. ಸರ್ಕಾರದ ಗಮನಕ್ಕೆ ಬಂದಿರುವುದು 307. ಈ ಪ್ರಕರಣಗಳಲ್ಲಿ ಭಾಗಿಯಾಗಿರತಕ್ಕ ಅಧಿಕಾರಿ ಇರಬಹುದು, ಅಥವಾ ನೌಕರ ಇರಬಹುದು. ಕರ್ತವ್ಯ ಲೋಪವಾಗಿರಬಹುದು, ಇವರಿಗೆ 178 ಪ್ರಕರಣಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರತಕ್ಕಂ ಥದ್ದು. ಅದರಲ್ಲಿ 16 ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ್ದೇವೆ. 108 ಪ್ರಕರಣಗಳನ್ನು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಇನ್ನು 33 ಪ್ರಕರಣಗಳಿಗೆ ನೇಮಕ ಮಾಡಬೇಕು. ಕೂಡಲೇ

ಅದನ್ನು ಮಾಡುತ್ತೇವೆ. ಮತ್ತು 32 ಪ್ರಕರಣಗಳು ಅಂತಿಮ ಆದೇಶಕ್ಕೆ ಇಟ್ಟುಕೊಂಡಿದ್ದೇವೆ. ಅದಕ್ಕೆ ಆದೇಶವನ್ನು ಕೊಡಬೇಕು. 16 ಪ್ರಕರಣಗಳನ್ನು ಲೋಕಾಯುಕ್ತ ಸಿಓಡಿ ತನಿಖೆಗೆ ವಹಿಸಿದ್ದೇವೆ. ಸರ್ಕಾರದ ಹಂತದಲ್ಲಿ 129 ಪ್ರಕರಣಗಳು ಇದ್ದಾವೆ. ಅವುಗಳಲ್ಲಿ 55 ಪ್ರಕರಣಗಳನ್ನು ಅದರ ಬಗ್ಗೆ ಎನ್ ಕ್ವೈರಿ ಆಫೀಸರನ್ನು ನೇಮಕ ಮಾಡಿದ್ದೇವೆ. 41 ಪ್ರಕರಣಗಳಲ್ಲಿ ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪ್ರಾರಂಭಿಸಿದ್ದು 14 ಪ್ರಕರಣಗಳನ್ನು ಲೋಕಾ ಯುಕ್ತಕ್ಕೆ ವಹಿಸಿದ್ದೇವೆ. 4 ಪ್ರಕರಣಗಳು ಕೆಎಟಿಯಲ್ಲಿ ಬಾಕಿ ಇದ್ದಾವೆ. 11 ಪ್ರಕರಣಗಳಿಗೆ ವಿಚಾರಣಾ ವರದಿ ಬಂದಿದೆ. ದಂಡನೆಯನ್ನು ವಿಧಿಸುವುದಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಇನ್ನೆರಡು ಪ್ರಕರಣಗಳನ್ನು ನಾವು ಸಿಓಡಿಗೆ ವಹಿಸಿದ್ದೇವೆ. ಒಂದು ಪ್ರಕರಣವನ್ನು ಸಿವಿಲ್ ಮೊಕದ್ದಮೆಯನ್ನು ಹೂಡಲಾಗಿದೆ. ಇನ್ನೊಂದು ಪ್ರಕರಣವನ್ನು ಆಡಳಿತ ಮತ್ತು ಸಿಬ್ಬಂದಿ ಇಲಾಖೆಗೆ ವರ್ಗ ಮಾಡಿದ್ದೇವೆ. ಇಷ್ಟು ಕ್ರಮವನ್ನು ಸರ್ಕಾರದ ವತಿಯಿಂದ 129 ಪ್ರಕರಣ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಗ್ರಾಮಪಂಚಾಯಿತಿಯಲ್ಲಿರತಕ್ಕ 302 ಪ್ರಕರಣಗಳ ಬಗ್ಗೆ ಈ ರೀತಿಯಲ್ಲಿ ನಾವು ಕ್ರಮವನ್ನು ಕೈಗೊಂಡಿದ್ದೇವೆ. ಇಡೀ ರಾಜ್ಯದಲ್ಲಿ ನಮಗೆ ಲಭ್ಯ ಆಗಿರತಕ್ಕಂಥದ್ದು ಎಲ್ಲಾ ಮಾಹಿತಿಯನ್ನು ಇಲ್ಲಿ ಕೊಟ್ಟಿದ್ದೀರಿ. ಮಾನ್ಯ ಸದಸ್ಯರು ಕೆಲವು ಕಡೆ ಇತ್ತು, ಇಲ್ಲಿ ಇರಲಿಲ್ಲ ಎನ್ನುವ ಅಭಿಪ್ರಾಯವನ್ನು ಕೂಡ ಹೇಳಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಇಡೀ ಸಭೆ ನಾವು ನಿರ್ಣಯ ಮಾಡಿದೆವು, 5 ಕೋಟಿ ರೂ. ಅವ್ಯವಹಾರವಾಗಿದೆ. ನಾವು ನಿರ್ಣಯ ಮಾಡಿ ಕಳುಹಿಸಿದ್ದೆವು, ಏನಾಯಿತು ಎಂದು ಗೊತ್ತಿಲ್ಲ, ಹಾಗೆ ಮಾನ್ಯ ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. ಈ ಎಲ್ಲಾ ಅಧಿಕಾರ ವಿಕೇಂದ್ರಿ ಕರಣ ವ್ಯವಸ್ಥೆ ಬಲ ಆಗಬೇಕೆಂದು ಒಂದು ಕಡೆ ಮಾತನಾಡುತ್ತೇವೆ, ಮತ್ತೊಂದು ಕಡೆ ಈ ರೀತಿ ಭ್ರಷ್ಟಾಚಾರ ಇದೆ ಎಂದು ಹೇಳಿದರು. ಈ ಒಂದು ಸಂಸ್ಥೆಯನ್ನು ಅಧಿಕಾರಕ್ಕೆ ತಂದಂಥ ಸಂದರ್ಭದಲ್ಲಿ ಮಾನ್ಯ ನಜೀರ್ ಸಾಬ್‌ರವರು ಇದ್ದಾಗ....

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ: ಅದು ಅನುಬಂಧ 92 ರಲ್ಲಿ ಬಂದಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಆರು ಜನ ಸಸ್ಪೆಂಡ್ ಆದದ್ದು ಮಾತ್ರವಲ್ಲ. ಒಂದು ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ತೆಗೆದು ಅವರ ಮೇಲೆ ಸರ್ಕಾರವೇ ಕ್ರಿಮಿನಲ್ ಪ್ರಾಸಿಕ್ಯೂಷನ್ ಆರ್ಡರ್ ಮಾಡಿದೆ.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಎಲ್ಲಾ ಹೇಳಿದ್ದೇವೆ. ಏನೇನು ಮಾಡಿದ್ದೇವೆ, ಕ್ರಿಮಿನಲ್ ಮೊಕದ್ದಮೆಯನ್ನು ಯಾರ ಮೇಲೆ ಹಾಕಿದ್ದೇವೆ, ಲೋಕಾಯುಕ್ತಕ್ಕೆ ಯಾರನ್ನು ಹಾಕಿದ್ದೇವೆ...

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೇ, ನನ್ನದು ಏನೆಂದರೆ,

ಇದು ಪ್ರಶ್ನೋತ್ತರ ಸಾರ್. ಮಾನ್ಯ ಅಧ್ಯಕ್ಷರು ಹೇಳುವುದು ನಮಗೆ ಅರ್ಥವಾಗುತ್ತದೆ. ಪ್ರಶ್ನೆ ಏನೆಂದರೆ, ನಿಮ್ಮ ಅಧಿಕಾರಿಗಳು ಮುಚ್ಚಿಟ್ಟಿದ್ದಾರೆ. ಸರಿಯಾದ ವರದಿಯನ್ನೇ ಕೊಟ್ಟಿಲ್ಲ. ಅದಕ್ಕೆ ಉಡುಪಿ, ಕೋಲಾರ ಉದಾಹರಣೆ. ಇನ್ನೊಂದು ನಿಮಗೆ ತಾಜಾ ಉದಾಹರಣೆ ಎಂದರೆ ನಮ್ಮ ಶಿವಮೊಗ್ಗ ಜಿಲ್ಲೆಯದು. ಒಬ್ಬ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿದ ಮೇಲೆ 27-7-2003ರಲ್ಲಿ ಇವತ್ತು ನಾವು ಯಾವ ವರ್ಷದಲ್ಲಿದ್ದೇವೆ? ಅವನಿಗೆ ಎರಡನೇ ನೋಟಿಸ್ ಅನ್ನು ಜಾರಿ ಮಾಡಿದ್ದೇವೆ ಎಂದು ಹೇಳುವುದಾದರೆ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ ಎಂದು ಹೇಳುವುದಾದರೆ ಅವನನ್ನು ರಕ್ಷಣೆ ಮಾಡುವುದು ತಾನೇ? ಏಕೆ ಅಮೌಂಟನ್ನು ಹಾಕಿಲ್ಲ? ಇಷ್ಟು ಕೋಟಿ, ಇಷ್ಟು ಲಕ್ಷ, ಇಷ್ಟು ಅವ್ಯವಹಾರ ಇದೆ ಎಂದು ನೀವ್ಯಾಕೆ ಫಿಗರನ್ನು ಇಲ್ಲಿ ಕೊಡಲಿಲ್ಲ? ಪತ್ರಿಕೆ ಮೂಲಕ ಈ ರಾಜ್ಯದ ಜನರಿಗೆ ಗೊತ್ತಾಗುತ್ತಿರಲಿಲ್ಲವೇ?

(ಗೊಂದಲ)

ಶ್ರಿ ಬಿ.ಎಸ್. ಯಡಿಯೂರಪ್ಪ: ನಿಮಗೆ ಹೇಗೆ ಸಮಾಧಾನ ಆಗಿದೆ ಹೇಳಿ?

ಡಾ. ಹೆಚ್.ಸಿ. ಮಹದೇವಪ್ಪ: ಇಲ್ಲ, ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಆ ರಿಪ್ಲೈಯನ್ನು ನೀವು ನೋಡದೇ ಕಣ್ಣುಮುಚ್ಚಿಕೊಂಡು ಇಲ್ಲಿ ಹೇಗೆ ಹೇಳುತ್ತಿದ್ದೀರಿ?

ಡಾ. ಹೆಚ್.ಸಿ. ಮಹದೇವಪ್ಪ: ಉಡುಪಿ ಜಿಲ್ಲೆಯಲ್ಲಿ ಅನಂತರಾಮ್, ಅಲ್ಲಿಂದ ಬಂದು ಮಂಜುನಾಥ್ ಉಡುಪಿ ಪ್ರಕರಣದಲ್ಲಿ ಇಂದೂದರ್ ಎಂದು ಹೇಳಿ ನಾವು ನ್ಯಾಯಾಧೀಶರನ್ನು ನೇಮಕ ಮಾಡಿದ್ದೇವೆ.

ಶ್ರೀವಾಟಾಳ್ ನಾಗರಾಜ್: ನಾನು ಸುಮಾರು ಓದಿದ್ದೇನೆ. ಈ ಪ್ರಶ್ನೆಗೆ ಬಹುಶಃ ಇತಿಹಾಸದಲ್ಲಿ ಇಷ್ಟು ಪುಟದ ಉತ್ತರ ಕೊಟ್ಟಿರುವುದು ಇದೇ ಮೊದಲು. 17 ಪುಟ ಇದೆ. ಇದು ಪುಟ ಅಲ್ಲ. ಇದು ಒಂದು ದೊಡ್ಡ ಪುಸ್ತಕ. 123 ಮೊಕದ್ದಮೆಗಳು ಎಂದು ಕಾಣುತ್ತದೆ. 123 ಭಾಗ. ಇಷ್ಟನ್ನೂ ನಾನು ಆಗಿನಿಂದ ಕುಳಿತು ಓದುತ್ತಿದ್ದೇನೆ. ಯಾರನ್ನೂ ಜೈಲಿಗೆ ಕಳಿಸಿಲ್ಲ. ಅಷ್ಟೊತ್ತಿನಿಂದ ಪುಟ-ಪುಟ ಬಿಚ್ಚುತ್ತಿದ್ದೇನೆ. ಪುಟ-ಪುಟ ನೋಡುತ್ತಿದ್ದೇನೆ. ಏನಾದರೂ ನೋಡೋಣ ಎಂದು ಪುಟ-ಪುಟ ತಿರುವಿ ಹಾಕಿದೆ. ನೋಡಿ ಮೊದಲನೆಯ ಪುಟ ಇಲಾಖೆಯ ವಿಚಾರಣೆ, ಇಲಾಖೆಯ ವಿಚಾರಣೆ, ಇಲಾಖೆಯ ವಿಚಾರಣೆ ,ಇಲಾಖೆಯ ವಿಚಾರಣೆ, ನೆಗೆದು ಬಿದ್ದು ಹೋಯಿತಾ? ಆಮೇಲೆ ತಿರುಗಿ ವಿಚಾರಣೆ ಪ್ರಕ್ರಿಯೆ, ವಿಚಾರಣೆ ಪ್ರಕ್ರಿಯೆ, ವಿಚಾರಣೆ ಪ್ರಕ್ರಿಯೆ, ನೆಗದು ಬಿದ್ದು ಹೋಯಿತಾ? ಆಮೇಲೆ ಬಹಳ ಚೆನ್ನಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಯಾರು ಅವ್ಯವಹಾರ ಮಾಡಿದ್ದಾನೆ, ಪ್ರಮೋಷನ್ ಆಗಿದ್ದಾನೆ. ಅವನೇ ಬಂದು ಎನ್‌ಕ್ವೈರಿ ಮಾಡುವುದು.

ಶ್ರೀ ವಾಟಾಳ್ ನಾಗರಾಜ್: ಹೌದು. ವಿಚಾರಣಾ ಅಧಿಕಾರಿಯನ್ನು ನೇಮಿಸಲಾಗಿದೆ. ವಿಚಾರಣಾ ಅಧಿಕಾರಿಯನ್ನು ನೇಮಿಸಲಾಗಿದೆ, ವಿಚಾರಣಾ ಅಧಿಕಾರಿಯನ್ನು ನೇಮಿಸಲಾಗಿದೆ. ಮುಗಿದು ಹೋಯಿತಾ ಸ್ವಾಮಿ. ನಾನು ಯಾವ ಪುಟದಲ್ಲಾದರೂ ಹುಡುಕುತ್ತಿದ್ದೇನೆ. ಮಾಧುಸ್ವಾಮಿಯವರೇ, ಯಾರನ್ನಾದರೂ ಒಬ್ಬರನ್ನು ಪರಪ್ಪನ ಅಗ್ರಹಾರಕ್ಕೆ ಕಳಿಸಿದ್ದಾರಾ ಎಂದು ಹುಡುಕುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಪರಪ್ಪನ ಅಗ್ರಹಾರ ಏಕೆ ಇಟ್ಟುಕೊಂಡಿದ್ದೀರಿ?

ಶ್ರೀ ವಾಟಾಳ್ ನಾಗರಾಜ್: ಜೈಲು. ಇಲ್ಲ ಹುಡುಕಲು ಆಗುತ್ತಿಲ್ಲ. ಯಡಿಯೂರಪ್ಪನವರೆ, ಮಾನ್ಯ ಮಹದೇವಪ್ಪನವರೇ, ತಮ್ಮ ಇಲಾಖೆಯದು. ಒಬ್ಬರನ್ನಾದರೂ ಜೈಲಿಗೆ ಕಳಿಸತಕ್ಕಂಥ ತಾಕತ್ತು, ಶಕ್ತಿ ನಿಮ್ಮ ತಂತ್ರ ಶಕ್ತಿ, ನಿಮ್ಮ ಇಲಾಖೆಯ ದಕ್ಷತೆ, ನಿಮ್ಮ ಇಲಾಖೆಯ ಬಗ್ಗೆ ಆಮೇಲೆ ಪಾರದರ್ಶಕತೆ, ಯಾವುದು, ಒಂದಾದರೂ ಇದೆಯಾ? ಇದು ನಿಜಕ್ಕೂ ಈ ರಾಜ್ಯದ ಜನ ತಲೆತಗ್ಗಿಸಬೇಕಾಗಿದೆ. ಯಾರಿಗಾದರೂ ಒಬ್ಬರಿಗೆ ನೀವು ಶಿಕ್ಷೆ ವಿಧಿಸಿದ್ದೀರಾ? ಒಬ್ಬರಿಗೆ ಯಾರನ್ನಾದರೂ ಮನೆಗೆ ಕಳಿಸಿದ್ದೀರಾ? ಜೈಲಿಗೆ ಕಳಿಸಿದ್ದೀರಾ? ಏನಾದರೂ ಮಾಡಿದ್ದೀರಾ? ಸಾಮಾನ್ಯ ರೈತ ಸಿಕ್ಕಿಹಾಕಿಕೊಂಡರೆ ಬಿಡುತ್ತೀರಾ ಅವನನ್ನು ನೀವು? ಮನೆಗೆ ನುಗ್ಗಿಸುತ್ತೀರಿ. ಹರಾಜು ಹಾಕುತ್ತೀರಿ. ಬೀದಿಗೆ ಕಳಿಸುತ್ತೀರಿ? ಎಲ್ಲಾ ತರಹ ಮಾಡುತ್ತೀರಿ. ಇಲ್ಲಿ ಒಬ್ಬ ಯಾರನ್ನಾದರೂ, ನಾನು ಹೇಳುತ್ತೇನೆ 17 ಪುಟದಲ್ಲಿ ಒಂದು ಕಡೆನಾದರೂ ಕ್ರಮ ಇದೆಯಾ? ಮಾನ್ಯ ಅಧ್ಯಕ್ಷರೆ, ತಾವು ತರಿಸಿ ದಯವಿಟ್ಟು ನೋಡಬೇಕು. ತಾವು ನೋಡಲೇಬೇಕು. ಇದನ್ನು ವಸ್ತು ಪ್ರದರ್ಶನಕ್ಕೆ ಇಡಬಹುದು. ಬಹುಶಃ ಇತಿಹಾಸದಲ್ಲಿ ದಸರಾ ವಸ್ತು ಪ್ರದರ್ಶನ ಇರಬಹುದು. ಕರ್ನಾಟಕ ರಾಜ್ಯದಲ್ಲಿ ಎಲ್ಲೇ ವಸ್ತು ಪ್ರದರ್ಶನ ನಡೆದರೂ ಇದನ್ನು ಇಡಬಹುದು. ಬಹುಶಃ ಇದನ್ನು ದೇಶದ ಎಲ್ಲಾ ಕಡೆಗೂ ಕಳಿಸಬಹುದು. ಈ ಪ್ರಶ್ನೆ ಪತ್ರಿಕೆ. ಇದು ಉತ್ತರ. ಉತ್ತರ– ಒಬ್ಬರಿಗಾದರೂ ಸಾಮಾನ್ಯ ಮೈ ನೋವಾಗತಕ್ಕಂಥ ಒಂದು ಶಿಕ್ಷೆಯನ್ನು ನೀವು ಎಲ್ಲಾದರೂ ಸೂಚಿಸಿದ್ದೀರಾ? ಅಥವಾ ಮನಸ್ಸಿಗೆ ನೋವಾಗತಕ್ಕಂಥದ್ದು, ಎಷ್ಟು ಗಂಭೀರವಾಗಿ ಎಷ್ಟು ಶಿಸ್ತಿನಿಂದ ರಾಜ ದರ್ಬಾರ್‌ನಲ್ಲಿ ನೀವು ವಿಚಾರಣೆ ನಡೆಸುತ್ತಿದ್ದೀರಿ ಇದರಲ್ಲಿ ಎಲ್ಲಾದರೂ ಒಬ್ಬರಿಗೆ ಶಿಕ್ಷೆ ಆಗಿದೆಯಾ? ಎಲ್ಲೂ ಕಾಣಲಿಲ್ಲವಲ್ಲಾ? ನಾನು ಬಹಳ ಪ್ರಯತ್ನಪಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲ ಬಿಡಿ ಸಾರ್.

ಶ್ರೀ ವಾಟಾಳ್ ನಾಗರಾಜ್: ಇಲ್ಲ ಅಲ್ಲ. ಯಾವ ಮೂಲೆಯಲ್ಲಿ ನೋಡಿದರೂ ಇಲ್ಲ ಇದು ಇಷ್ಟು ತೀರಾ, ನಾಚಿಕೆಗೇಡು. ಯಾರ ಮೇಲೆ ಇದು? ಎಷ್ಟು ಲೂಟಿ

ಆಗಿದೆ? ಎಷ್ಟು ಪಂಚಾಯಿತಿಗಳಲ್ಲಿ? ಎಷ್ಟು ಜಿಲ್ಲಾ ಪಂಚಾಯತಿ, ಎಷ್ಟು ತಾಲ್ಲೂಕು ಪಂಚಾಯಿತಿಯಲ್ಲಿ ಲೂಟಿ ಮಾಡಿದ್ದಾರೆ, ದರೋಡೆ ಮಾಡಿದ್ದಾರೆ. ಇವರ ಬಗ್ಗೆ ನಾವು ಪ್ರಾಮಾಣಿಕ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲವಾ? ನಾವು ಏನು ಮಾಡಿದ್ದೇವೆ ಹೇಳಿ? ಒಬ್ಬರ ಮೇಲಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಪ್ರಶ್ನೆ ದಯವಿಟ್ಟು ಕೇಳಿ. ಜಿಲ್ಲಾ ಪಂಚಾಯಿತಿ ಹಗರಣ. ಬರೇ ಅಧಿಕಾರಿಗಳು ಮಾಡಿರತಕ್ಕದ್ದನ್ನು ಮಾತ್ರ ಹೇಳಿದಿರೇ ಹೊರತು ಅಧಿಕಾರೇತರರು ಮಾಡಿರತಕ್ಕಂಥ ಅವ್ಯವಹಾರಗಳ ಬಗ್ಗೆ ಒಂದು ಅಕ್ಷರ ಇಲ್ಲಿ ಇಲ್ಲ. ಅವರ ಮೇಲೆ ಕ್ರಮ ತೆಗೆದುಕೊಂಡಿರುವುದೂ ಇಲ್ಲಿ ಇಲ್ಲ. ಡಿಸ್ಕ್ರಿಷನರಿ ಗ್ರಾಂಟ್ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ಹೆಚ್ಚುವರಿ ಅನುಮೋದನೆ ತೆಗೆದುಕೊಂಡು ಬಿಟ್ಟು ಇಷ್ಟ ಬಂದ ಕಡೆ ಎಲ್ಲಾ ಅವರು ಕೆಲಸ ಮಾಡಿದ್ದಾರೆ. ಅದರ ಬಗ್ಗೆ ಪ್ರಸ್ತಾಪ ಇಲ್ಲ. ಬರೇ ಅಧಿಕಾರಿಗಳು. ಯಾರು ಅದು? ಯಾವನೋ ಒಬ್ಬ ಪಂಚಾಯತಿಯ ಸೆಕ್ರೆಟರಿ, ಯಾವನೋ ಒಬ್ಬ ಕಿರಿಯ ಇಂಜಿನಿಯರ್. ದೊಡ್ಡ ದೊಡ್ಡ ತಿಮಿಂಗಿಲಗಳನ್ನೆಲ್ಲಾ ಬಿಟ್ಟು ಬಿಟ್ಟು ಸಣ್ಣ ಸಣ್ಣವರನ್ನೆಲ್ಲಾ ಹಿಡಿದುಕೊಂಡು ಅವರ ವಿಚಾರಣೆ ಮಾಡುತ್ತಿದ್ದೇವೆಂದು ಅವರು ಹೇಳಿದ್ದಾರೆ. ಇಷ್ಟು ವರ್ಷಗಳಿಂದ ಕ್ರಮ ಇಲ್ಲ. ಅವರು ಮೂರು ವರ್ಷದ ಮಾಹಿತಿ ಕೇಳಿದ್ದಾರೆ. ಇಷ್ಟು ವರ್ಷಗಳಲ್ಲಿ ಇಷ್ಟು ಅವ್ಯವಹಾರ ನಡೆದಿದೆ. ಒಬ್ಬರಿಗಾದರೂ ಏನಾದರೂ ಶಿಕ್ಷೆ ಮಾಡತಕ್ಕ ಪ್ರಯತ್ನ ಆಗಲಿಲ್ಲ. ಕ್ರಮ ತೆಗೆದುಕೊಂಡಿಲ್ಲ. ಇಲ್ಲಿ ಹೇಗೆ ಈಗ ಅಧಿಕಾರಿ ವಿಕೇಂದ್ರೀಕರಣದಲ್ಲಿ ಕೋಟ್ಯಾಂತರ ರೂಪಾಯಿ, ಸಾವಿರಾರು ಕೋಟಿ ರೂಪಾಯಿ ಇಲ್ಲಿ ಹೋಗುತ್ತಿದೆ. ಆ ಸಾವಿರಾರು ಕೋಟಿ ರೂಪಾಯಿ ಈ ರೀತಿ ನುಂಗಿ ನೀರು ಕುಡಿದು ಹಾಳು ಮಾಡುತ್ತಿದ್ದಾರೆ. ಇದಕ್ಕೆ ಏನು ಸ್ಪಷ್ಟವಾದ ಕ್ರಮ ಎಂದು ಹೇಳಿ. ಈ ಕೋಲಾರ ಜಿಲ್ಲಾ ಪಂಚಾಯಿತಿಯದು ಹೇಳಿದ್ದಾರೆ. ಅಲಿಗೇಷನ್ ಮಾಡಿದ್ದಾರೆ. ಎಲ್ಲಾ ಮಾಡಿದ್ದಾರೆ. ನಮ್ಮ ಗಮನಕ್ಕೇ ಬಂದಿಲ್ಲ ಎಂದು ಹೇಳಿದರೆ, ನಾವು ಇನ್ನು ಏನು ಹೇಳಬೇಕು ಮಹದೇವಪ್ಪನವರೇ ಗಮನಕ್ಕೆ ಬಂದಿಲ್ಲವೆಂದರೆ ಏನು ಮಾಡಬೇಕು? ಐದು ಕೋಟಿ ರೂಪಾಯಿ ಐದು ಕೋಟಿ ರೂಪಾಯಿ ಗಮನಕ್ಕೆ ಬಂದಿಲ್ಲ ಎಂದರೆ ಹೇಗೆ?

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಹೇಳಲು ಅವರಿಗೆ ಒಂದು ಅವಕಾಶ ಕೊಡಿ.

ಶ್ರೀ ಜಯಪ್ರಕಾಶ್ ಹೆಗ್ಡೆ: ಅನುಬಂಧ-1ರಲ್ಲಿ ಉಡುಪಿಯಲ್ಲಿ ಯಾವುದೇ ಪ್ರಕರಣ ವರದಿ ಆಗಿಲ್ಲ ಎಂದು ಹೇಳುತ್ತಾರೆ. ಅನುಬಂಧ-2, ಪೇಜ್ ನಂಬರ್

90–99ರಲ್ಲಿ ಕೊಡುತ್ತಾರೆ. ಇಂಥಿಂಥದ್ದು ಆಗಿದೆ ಎಂದು ಜಿಲ್ಲಾ ಪಂಚಾಯತ್‌ದು. ಆದರೆ ಇದೇ ಸದನದಲ್ಲಿ ನಾನು ಒಬ್ಬ ಪಂಚಾಯಿತಿಯ ಅಧ್ಯಕ್ಷರು, ಕಾರ್ಯದರ್ಶಿಯವರ ಬಗ್ಗೆ ಕೊಟ್ಟಿದ್ದನ್ನು ಅಧ್ಯಕ್ಷ ಸ್ಥಾನದಿಂದ ತೆಗೆದು ಅವರ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಶನ್ ಆಯಿತು ಅದು ಇಲ್ಲಿ ಬರಲಿಲ್ಲ. ಇನ್ನೊಂದು ತಾಲ್ಲೂಕು ಪಂಚಾಯಿತಿಯ ಮೆಂಬರ್ ಮೇಲೆ ಕೊಟ್ಟಿದ್ದೇನೆ. ನಿಮ್ಮ ಇಲಾಖೆಗೂ ಕಳಿಸಿದ್ದೇನೆ. ಅವರೇ ಸ್ವತಃ ಗುತ್ತಿಗೆಯನ್ನು ಮಾಡಿದಂತಹುದು. ಅದೂ ಬಂದಿಲ್ಲ. ಆಮೇಲೆ ಇನ್ನೊಂದು ಪಂಚಾಯಿತಿಯಲ್ಲಿ ಅಧ್ಯಕ್ಷರು ಸ್ವತಃ ಸ್ವಜಲಧಾರೆ ಯೋಜನೆಯಲ್ಲಿ ಹಣವನ್ನು ಪಡೆದು ವೈಟ್ ಪೇಪರ್‌ನಲ್ಲಿ ಅವರು ಬರೆದು ಕೊಟ್ಟಿದ್ದಾರೆ. 500 ರೂಪಾಯಿ ಪಡೆದಿದ್ದೇನೆ ಎಂದು ಬರೆದು ಅಧ್ಯಕ್ಷ ಎಂದು ಸೀಲ್ ಹಾಕಿ ಕೊಟ್ಟಿದ್ದಾರೆ. ಹಾಲಾಡಿ ಪಂಚಾಯತಿಯದು, ಕಳತೂರ್ ಪಂಚಾಯಿತಿಯದು. ಉಡುಪಿ ತಾಲ್ಲೂಕು ಪಂಚಾಯತಿ ಸದಸ್ಯರ ಮೇಲೆ, ಇದು ಯಾವುದೂ ಇಲ್ಲಿ ಬರಲೇ ಇಲ್ಲ ಏಕೆ ಬರಲಿಲ್ಲ ಎಂದು ನನಗೆ ಗೊತ್ತಿಲ್ಲ. ಪ್ರಕರಣ ಇದೆ. ಆದರೂ ನಿಮ್ಮ ಉತ್ತರದಲ್ಲಿ ಬಂದಿಲ್ಲ ದಯವಿಟ್ಟು ಇದರ ಬಗ್ಗೆ ತನಿಖೆ ಮಾಡಿಸಿ.

ಶ್ರೀ ಎಸ್. ರಾಜೇಂದ್ರನ್: ಅಧ್ಯಕ್ಷರೇ,ಕೊನೆಗೆ ಮಂತ್ರಿಗಳು ಉತ್ತರ ಕೊಟ್ಟು ಕ್ಲೋಸ್ ಮಾಡಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಆಗಿದೆ.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್: ತಾವು ಏನು ಹೇಳಿದ್ದೀರಿ.Disciplinary action will be taken against the employees. It is not the question of employees. ಗಂಭೀರವಾದ ಪರಿಸ್ಥಿತಿ ಇದೆ. The offiver who prepares everything is solely responsible for this. ಜಿಲ್ಲಾ ಪಂಚಾಯತ್ ನಲ್ಲಿ ಆಫೀಸರ್ಸ್ ಮಾಡಿರುವಂತಹ ಗೊಂದಲಗಳು ಬೇರೆ ಎಲ್ಲೂ ಮಾಡಿಲ್ಲ. Just now our Hon'ble Dy. Chief Minister also spoke about the need for monitoring. There is no monitoring in this ಕಳೆದ ಮೂರು ವರ್ಷಗಳಿಂದ ಕ್ರಮ ತೆಗೆದುಕೊಂಡಿರುವುದು ಬಹಳ ಸಂತೋಷ.

But why it was not taken earlier. The Zp officers who are doing all these omissions and commissions knowingly and deliberately. You must take serious action against them, suspend them and dismiss them from their service.ಅದನ್ನು ನೀವು ಮಾಡಿದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ.You must take a bold decision to take serious action against the officers.

ಶ್ರೀ ಎನ್. ಯೋಗೀಶ್ ಭಟ್: ತಮ್ಮಲ್ಲಿ ಒಂದು ವಿನಂತಿ ಮಾಡುತ್ತೇನೆ. ತಾವು ಏನು ಉಲ್ಲೇಖ ಮಾಡಿದಿರಿ. ಸುಮಾರು 4 ಕೋಟಿಯಷ್ಟು ರೆಫರೆನ್ಸ್ ಬಂದಿದೆ. ನಾಲ್ಕು ಕೋಟಿಯಷ್ಟು ಅವ್ಯವಹಾರ ದಾಖಲು ಆಗಿದೆ. ಆದರೆ ರೆಫರ್ ಮಾಡಿರುವಂತಹದು ಕೇವಲ 8–10 ಕೇಸ್ ಮಾತ್ರ. ಅದು ಬಿಟ್ಟರೆ ಒಟ್ಟಾರೆ ತಾವು ಕೊಟ್ಟಿರುವುದರಲ್ಲಿ ಎಷ್ಟು ಅವ್ಯವಹಾರ ಆಗಿದೆ? ಎಷ್ಟು ಕೋಟಿ ಅವ್ಯವಹಾರ ಆಗಿದೆ? ಎರಡನೆಯದಾಗಿ ತಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಅಥವಾ ತಾಲ್ಲೂಕು ಪಂಚಾಯಿತಿಯಲ್ಲಿ ಅಕೌಂಟ್ಸನ್ನು ಮೇಂಟೇನ್ ಮಾಡುವಂತಹದು ಆಗುತ್ತಿದೆಯಾ? ಆಡಿಟಿಂಗ್ ಆಗುತ್ತಿದೆಯಾ? ಆಡಿಟ್‌ನಲ್ಲಿ ಎನ್‌ಕ್ವೈರಿ ಹಾಕಿದರೆ, ಕ್ವೈರಿ ಹಾಕಿದರೆ ಇದಕ್ಕೆ ರಿಪ್ಲೈ ಮಾಡುತ್ತಿದ್ದಾರಾ? ಇದರ ಬಗ್ಗೆ ಸ್ಪಷ್ಟ ಉತ್ತರ ಕೊಡಬೇಕು. ಒಬ್ಬ ಸಮಿತಿಯ ಅಧ್ಯಕ್ಷಕನಾದ ಹಿನ್ನೆಲೆಯಲ್ಲಿ ಸಾಕಷ್ಟು ಮಾಹಿತಿಗಳು ನನ್ನ ಹತ್ತಿರ ಇದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಕೇಳುತ್ತಿದ್ದೇನೆ.

ಡಾ. ಹೆಚ್.ಸಿ. ಮಹದೇವಪ್ಪ: ಈಗಾಗಲೇ ನಾನು ಹೇಳಿದೆ. 16 ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಮಾಡಿದ್ದೇವೆಂದು ಹೇಳಿದೆ. 32 ಪ್ರಕರಣಗಳಲ್ಲಿ ದಂಡ ವಿಧಿಸಿದ್ದೇವೆ ಎಂದು ಹೇಳಿದೆ. ಮತ್ತು ಇಲ್ಲಿ ಏನು ಡೀಟೇಲ್ ಆಗಿ ಕೊಟ್ಟಿದ್ದೇವೆ. ಎಲ್ಲೆಲ್ಲಿ ಅವ್ಯವಹಾರಗಳು ಆಗಿದ್ದಾವೆ? ಸುಮಾರು ಜಿಲ್ಲಾ ಪಂಚಾಯತಿಯಲ್ಲಿ 300, 308, ಸರ್ಕಾರದ ಮಟ್ಟದಲ್ಲಿ 125 ಎನ್‌ಕ್ವೈರಿ ವಿವಿಧ ಹಂತದಲ್ಲಿ ನಡೆಯುತ್ತಿದೆ. ಮತ್ತು ನಮಗೆ ಗೊತ್ತಿಲ್ಲದೇ ಮಾನ್ಯ ಸದಸ್ಯರುಗಳಿಗೆ ಮಾಹಿತಿ ಇದ್ದರೆ ಅದನ್ನು ಕೊಟ್ಟರೂ ನಾವು ತನಿಖೆ ಮಾಡಿಸಿ ಯಾವ ಮುಲಾಜಿಗೂ ಒಳಗಾಗದಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನೀವು ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈಗ ಬಂದಿರತಕ್ಕದ್ದೇ ಮಾಡಿಲ್ಲ

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ: ನಾವು ಖಂಡಿತವಾಗಿಯೂ ಮಾಡುತ್ತೇವೆ. ಯಾರ ಮುಲಾಜು ಇಲ್ಲ. ಯಾವ ರೆಕಾರ್ಡನ್ನು ಮುಚ್ಚಿಡಬೇಕಾಗಿಲ್ಲ. ಯಾರ್ಯಾರು

ಅವ್ಯವಹಾರ ಮಾಡಿದ್ದಾರೆ? ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ಮಾಹಿತಿ ಕೊಡುವುದಾದರೆ ಸರ್ಕಾರದ ಇಲಾಖೆ ಏಕೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಇಲಾಖೆ ಸತ್ತು ಹೋಗಿದೆ. ನಿಮ್ಮ ಇಲಾಖೆ ದಿವಾಳಿ ಆಗಿದೆ. ನಿಮ್ಮ ಇಲಾಖೆಗೆ ಹಿಡಿತ ಇಲ್ಲ ಇದು ನಿಜಕ್ಕೂ ಬಹಳ ಅತ್ಯಂತ ಅಪಾಯಕಾರಿ ಬೆಳವಣಿಗೆ.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳು ನಿರ್ದಿಷ್ಟವಾದ ಇಂತಹ ಪ್ರಕರಣ ಆಗಿದೆ ಎಂದರೆ ನಾಳೆನೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಹೇಳಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ನಿರ್ದಿಷ್ಟವಾಗಿ ಹೇಳುತ್ತಿದ್ದೇವೆ.

(ಗೊಂದಲ)

ಡಾ. ಹೆಚ್. ಸಿ. ಮಹದೇವಪ್ಪ: ...Tommorrow itself I will take disciplinary action against such officersssssss.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ; ಅಧ್ಯಕ್ಷರೆ, ನಾವು ನಿರ್ದಿಷ್ಟವಾಗಿ ಹೇಳುತ್ತಿದ್ದೇವೆ

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಹೈಯರ್ ಹೆಸರು ಏಕೆ ಕೊಡುವುದಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ನಿರ್ದಿಷ್ಟವಾಗಿ ಹೇಳುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಮ್ಮ ಛಾರ್ಜ್ ಏನು ಗೊತ್ತಾ ನಿಮ್ಮ ಅಧಿಕಾರಿಗಳು ವಿಷಯ ಮುಚ್ಚಿಟ್ಟಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ನಿರ್ದಿಷ್ಟವಾಗಿ ಹೇಳುತ್ತಿದ್ದೇವೆ. ಐದು ಕೋಟಿ ರೂಪಾಯಿ ಕೋಲಾರ ಜಿಲ್ಲಾ ಪಂಚಾಯತಿಯಲ್ಲಿ ಅವ್ಯವಹಾರ ಆಗಿದೆ ಎನ್ನತಕ್ಕದ್ದು, ಅಲ್ಲಿ ಜಿಲ್ಲಾ ಪಂಚಾಯಿತಿಯ ಸದಸ್ಯರೇ ಆರೋಪ ಮಾಡಿ ತನಿಖೆಗೆ ಹಾಕಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಏನೂ ಪ್ರಕರಣ ಬೆಳಕಿಗೆ ಬಂದಿಲ್ಲ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಿ ಏನಾಗುತ್ತಿದೆ ಸಾರ್, ಇಲಾಖೆಯಲ್ಲಿ ಹೊಲಸು ಎದ್ದು ನಾರುತ್ತಿದೆ. ಒಂದೂ ಕೇಸ್ ಇಲ್ಲ ಎಂದು ಹೇಳುತ್ತಿದ್ದೀರಲ್ಲ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ: ನಮಗೆ ಯಾರ ಮುಲಾಜು ಇಲ್ಲ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ: ಎಲ್ಲೆಲ್ಲಿ ಅವ್ಯವಹಾರ ನಡೆದಿದೆ, ಸರ್ಕಾರದ ನಿರ್ದಿಷ್ಟವಾಗಿ ಕ್ರಮ ತೆಗೆದುಕೊಳ್ಳುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಲೂಟಿ ಆಗುತ್ತಿದೆ. ದರೋಡೆ ಆಗುತ್ತಿದೆ.

ಡಾ. ಹೆಚ್.ಸಿ. ಮಹದೇವಪ್ಪ: ಎಲ್ಲಿ ಅವ್ಯವಹಾರ ನಡೆದಿದೆ, ಸರ್ಕಾರ ನಿರ್ದಿಷ್ಟವಾಗಿ ಕ್ರಮ ತೆಗೆದುಕೊಳ್ಳುತ್ತದೆ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ: ಕೆಲಸ ಆಗದೇ ಇರುವಂಥ ಯಾವ ಸನ್ನಿವೇಶವೂ ಇಲ್ಲ. ಯಾರು ಯಾರು ಅವ್ಯವಹಾರ ಮಾಡಿದ್ದಾರೆ, ಅವರ ಬಗ್ಗೆ ನಿರ್ದಿಷ್ಟವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ನಿರ್ದಿಷ್ಟವಾಗಿ ಆರೋಪ ಮಾಡುತ್ತಿದ್ದೇವೆ.

ಡಾ. ಹೆಚ್.ಸಿ. ಮಹದೇವಪ್ಪ: ನಾನು ಇಷ್ಟೆಲ್ಲಾ ಹೇಳುತ್ತಾ ಇದ್ದೇನೆ. ಆದರೂ ನೀವು ಈ ರೀತಿ ಮಾತನಾಡುತ್ತಾ ಇದ್ದರೆ ಹೇಗೆ? ನೀವೆಲ್ಲಾ ಸೀನಿಯರ್ಸ್ ಇದ್ದೀರಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಕಾರವಾರ ಜಿಲ್ಲಾ ಪಂಚಾಯ್ತಿ ಸಿಇಓ ಬಗ್ಗೆ ಸಿಬಿಐ ತನಿಖೆ ನಡೆಯುತ್ತಾ ಇದೆ.

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ನೀವೆಲ್ಲರೂ ಕುಳಿತುಕೊಳ್ಳಿ. ನಿಮ್ಮ ಸಮಸ್ಯೆಯನ್ನೆಲ್ಲಾ ಮುಂದಿಟ್ಟಿದ್ದೀರಿ. ಮಂತ್ರಿಗಳು ಉತ್ತರ ಕೊಡಬೇಕು. ಅವರು ಉತ್ತರ ಕೊಡುವುದಕ್ಕೆ ಮುಂಚಿತವಾಗಿ ಈ ರೀತಿ ಎಲ್ಲರೂ ಎದ್ದುನಿಂತರೆ ಹೇಗೆ? ಅವರಿಗೊಂದು ಅವಕಾಶ ಕೊಡಿ, ನೀವು ಪ್ರಶ್ನೆ ಕೇಳಿದ್ದೀರಿ. ಅದಕ್ಕೆ ಅವರೇನು ಉತ್ತರ ಹೇಳುತ್ತಾರೆ ಎಂಬುದನ್ನು ಕೇಳಿ, ನಂತರ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಮ್ಮ ಆರೋಪ, ಅನೇಕ ಪ್ರಮುಖ ಭ್ರಷ್ಟಾಚಾರ ಹಗರಣಗಳಿರುವಂಥ ಜಿಲ್ಲಾ ಪಂಚಾಯ್ತಿ ಅವ್ಯವಹಾರಗಳನ್ನು ಮುಚ್ಚಿಟ್ಟು, ಅದು ಉಡುಪಿ ಇರಬಹುದು. ಅದು ಕೋಲಾರ ಇರಬಹುದು ಕಾರವಾರದಲ್ಲಿ ಸಿಇಓ ಬಗ್ಗೆ ಏನು ನಡೆಯುತ್ತಿರುವುದು? ಅದು ಸಿಬಿಐ ತನಿಖೆ ಇರಬಹುದು. ಈ ಹಗರಣಗಳ ಬಗ್ಗೆ ಯಾವುದೇ ವಿವರವನ್ನು ಕೊಡದೇ, ಎಲ್ಲವನ್ನೂ ಮುಚ್ಚಿ ಹಾಕಿ, ಕಳೆದ ಮೂರು ವರ್ಷ ಹಿಂದೆ ಅಧಿಕಾರದಲ್ಲಿ ಇದ್ದರೋ, ಆ ಹಗರಣಗಳು ನಡೆಯಿತು. ಅದನ್ನು ಮುಚ್ಚಿಹಾಕುವುದಕ್ಕೆ ನಿಮ್ಮನ್ನು ಗ್ರಾಮೀಣ ಅಭಿವೃದ್ಧಿ ಸಚಿವರನ್ನು ಮಾಡಿದ್ದಾರೆಯೇ? ಅವರಿಗೆ ರಕ್ಷಣೆ ಮಾಡುವಂಥ ಕೆಲಸ ಮಾಡುತ್ತಿದ್ದೀರಿ. ಭ್ರಷ್ಟಾಚಾರದ ಕುಮ್ಮಕ್ಕು ಕೊಡುತ್ತಿದ್ದೀರಿ. ಹಗಲು ದರೋಡೆಗೆ ನೀವೆಲ್ಲಾ ಶಾಮೀಲಾಗಿದ್ದೀರಿ ಎಂದು ಆರೋಪ ಮಾಡಿ, ನಿಮ್ಮ ಈ ಪ್ರಶ್ನೆ ಈ ಉತ್ತರಗಳೂ ಯಾವುದೂ ಸಮಂಜಸವಾಗಿಲ್ಲ. ಇವತ್ತು ಯಾರೂ ಹೆದರುವುದಿಲ್ಲ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ನಿಮ್ಮ ಕಾಲದಲ್ಲಿ ಕುಲಗೆಟ್ಟು ಹೋಗುತ್ತೆ. ಈ ಭ್ರಷ್ಟರಿಗೆ ರಕ್ಷಣೆ ಕೊಡುವ ಕೆಲಸ ಮಾಡಿದ್ದೀರಿ, ಇದನ್ನು ಪ್ರತಿಭಟನೆ ಮಾಡಿ, ನಾವು ಸಭಾತ್ಯಾಗ ಮಾಡುವುದನ್ನು ಬಿಟ್ಟು ಇನ್ನೇನಿದೆ? ನಾವು ಏಕೆ ಇಲ್ಲಿ ಕುಳಿತುಕೊಳ್ಳಬೇಕು? ನೀವು ಪ್ರಶ್ನೆಗೆ ಉತ್ತರ ತರಿಸಿ ನೋಡಿ. ಮರ್ಯಾದೆ ಇರುವವರು, ಜವಾಬ್ದಾರಿ ಇರುವವರು ರಾಜ್ಯದ ಜನ ನಿಮ್ಮ ಉತ್ತರಗಳನ್ನು ತೆಗೆದುಕೊಂಡು ಏನಂದುಕೊಳ್ಳಬಹುದು? ನೀವು ಈ ಸದನದಲ್ಲಿ ನಿಮಗೆ ಖುಷಿ ಬಂದ ಹಾಗೆ ಉತ್ತರಗಳನ್ನು ಕೊಟ್ಟುಕೊಂಡು...

ಶ್ರೀ ವಾಟಾಳ್ ನಾಗರಾಜ್: ಭ್ರಷ್ಟಾಚಾರದ ವಿಕೇಂದ್ರೀಕರಣ ನಿಮ್ಮದು.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ: ಅಧಿಕಾರವನ್ನೇ ಕಿತ್ತುಕೊಳ್ಳತಕ್ಕ ಮಾತನಾಡುತ್ತಾ ಎರಡು ರಾಜಕೀಯ ನೀತಿಯನ್ನು ಅನುಸರಿಸತಕ್ಕ ನೀತಿ ಸರಿಯಲ್ಲ. ನಾವು ಏನು

ಉತ್ತರ ಕೊಡಬೇಕೋ ಅದನ್ನೆಲ್ಲಾ ಕೊಟ್ಟಿದ್ದೇವೆ. ಸರ್ಕಾರ ಯಾರ ಮುಲಾಜಿಗೂ ಒಳಗಾಗುವುದಿಲ್ಲ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ: ಸನ್ಮಾನ್ಯ ಉಪಾಧ್ಯಕ್ಷರೇ, ಎಲ್ಲ ಜಿಲ್ಲೆಗಳಲ್ಲೂ ವ್ಯಾಪಕವಾಗಿ ಭ್ರಷ್ಟಚಾರ ಇದೆ. ನಾವು ಎಲ್ಲಾ ಜಿಲ್ಲಾ ಪಂಚಾಯ್ತಿ ಬಗ್ಗೆಯೂ ಹೇಳಿದ್ದೇವೆ. ಇಡೀ ಆರ್.ಡಿ.ಪಿ.ಆರ್. ವ್ಯವಸ್ಥೆ ರಾಜ್ಯದಲ್ಲಿ ಹೊಲಸೆದ್ದು ನಾರುತ್ತಾ ಇದೆ. ನಾವು ಅದನ್ನೊಂದು ದೊಡ್ಡ ಸ್ವರ್ಗ ಸೃಷ್ಟಿ ಮಾಡಿದ್ದೇವೆಂದು ಈ ರಾಜ್ಯದಲ್ಲಿ ಭಾಷಣ ಮಾಡಿಕೊಂಡು ಬಂದಿದ್ದಾರೆ. ಯಾವುದಾದರೂ ವಿಷಯ ಎತ್ತಿದರೆ, ವಿಕೇಂದ್ರೀಕೃತ ವ್ಯವಸ್ಥೆ. ಹಳ್ಳಿಗಳಲ್ಲಿ ಸ್ವರ್ಗ ಸೃಷ್ಟಿಯಾಗಿದೆಯೆಂದು, ಸೆಕ್ರೆಟರಿಯಿಂದ ಹಿಡಿದು ಸಿಇಒವರೆಗೆ ಮಾಡಬಾರದು ಮಾಡುತ್ತಿದ್ದಾರೆ. ಎಲ್ಲಾ ಕಡೆ ನಾವು ಬರೆದಿದ್ದೇವೆ. ತಿಪಟೂರು ತಾಲ್ಲೂಕು ಪಂಚಾಯ್ತಿಯಲ್ಲಿ ನಿರ್ಣಯ ಮಾಡಿದ್ದೇವೆ. ಚಿಕ್ಕನಾಯ್ಕನಹಳ್ಳಿಯಲ್ಲಿ ಸಾರ್. ನಾನು ಹತ್ತು ಸಾರಿ ಹೇಳುತ್ತೇನೆ. ಒಂದೇ ಒಂದು ಹುದಿ ಹಾಕುವುದಕ್ಕೆ ಒಬ್ಬನೇಒಬ್ಬ ಸೆಕ್ರಟರಿ 71 ಬಿಲ್ಲನ್ನು ಮಾಡಿದ್ದಾನೆ. 7 ಜನಕ್ಕೆ ಮಾತ್ರ ಹುದಿ ಹಾಕಿಕೊಟ್ಟಿದ್ದಾನೆ. ನಾನು ಕೆ.ಡಿ.ಪಿ.ಯಲ್ಲಿ ಕುಳಿತುಕೊಂಡು ನಿರ್ಣಯ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಯಾವುದು ಹಗರಣವೇ ಇಲ್ಲವೆಂಬ ಸ್ಥಿತಿಗೆ ಮಂತ್ರಿಗಳು ಬಂದರೆ, ಇದಕ್ಕಿಂತ ದುರಾದೃಷ್ಟ ಈ ರಾಜ್ಯಕ್ಕೆ ಬೇರೆ ಇಲ್ಲ. ನಾನು ತಮಗೆ ಸ್ಪಷ್ಟವಾಗಿ ಒತ್ತಾಯ ಮಾಡುತ್ತಿದ್ದೇನೆ ತಾವು ಒಪ್ಪಿಕೊಳ್ಳಬೇಕು. ಇಲ್ಲವೇ ನಮ್ಮ ಜೊತೆಯಲ್ಲಿ ಬನ್ನಿ. ನಾವು ಕರೆದುಕೊಂಡು ಹೋಗಿ, ತೋರಿಸುತ್ತೇವೆ. ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಿ. ನಿಮ್ಮ ಮೇಲ್ಗಡೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೀರಾ ಎಂದು ಕೇಳುತ್ತೇನೆ. ನಂಬರ್ ಒನ್ ನಿಂದ ಹಿಡಿದು ಸಿಇಓವರೆಗೆ ಕ್ರಮ ತೆಗೆದುಕೊಳ್ಳುತ್ತೀರಾ, ನಿಮಗೆ ದಮ್ ಇದೆಯಾ? ಇವತ್ತು ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮ ಪಂಚಾಯ್ತಿಗಳು ಏನಾಗಿವೆ? ಸುಮ್ಮನೇ ಇಲ್ಲಿ ಭಾಷಣ ಮಾಡಿಬಿಟ್ಟರೆ ಆಗಿ ಹೋಯಿತೇ?

ಶ್ರೀ ವಾಟಾಳ್ ನಾಗರಾಜ್: ನೀವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ನಿಮ್ಮ ಇಲಾಖೆ ಸಂಪೂರ್ಣ ಭ್ರಷ್ಟಾಚಾರದಲ್ಲಿ ಕೂಡಿದೆ.

ಶ್ರೀ ಜೆ.ಪಿ. ಮಾಧುಸ್ವಾಮಿ: ನೀವು ಮನೆ ಕೊಡುವುದರಿಂದ ಹಿಡಿದು, ಒಂದು ಹುದಿ ಬದುವಿನಿಂದ ಹಿಡಿದು ಯಾವುದೇ ತೆಗೆದುಕೊಳ್ಳಿ. ಇವತ್ತು ಹಳ್ಳಿಗಳಲ್ಲಿ ಕೂಡಿ ಹಾಕಿದ್ದಾರೆ. ಬೆಳಿಗೆರೆ ಪಂಚಾಯ್ತಿಯಲ್ಲಿ ಕೂಡಿ ಹಾಕಿ ಬೀಗ ಹಾಕಿದ್ದಾರೆ. ತುಮಕೂರಿನಲ್ಲಿ ಹಗರಣವೇ ಇಲ್ಲವೆಂದು ನೀವು ಹೇಳುತ್ತೀರಿ. ಈ ರೀತಿ ಸದನದಲ್ಲಿ

ಹೇಳಿದರೆ ಗತಿ ಏನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ದುರುಪಯೋಗದ ವಿಚಾರದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರನ್ನು ಅರೆಸ್ಟ್ ಮಾಡಿಸಿದ್ದಾರೆ. ಕೋರ್ಟಿನಿಂದ ಬೇಲ್ ತೆಗೆದುಕೊಂಡು ಬಂದಿದ್ದಾರೆ. ನೀವು "ಇಲ್ಲ" ಎಂದು ಹೇಳುತ್ತೀರಿ ಇನ್ನಾವುದನ್ನು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್: ತಾವು ಸಚಿವರಾಗಿ, ಪ್ರಾಮಾಣಿಕ ಉತ್ತರ ಕೊಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಿಮ್ಮಲ್ಲಿ ಪ್ರಾಮಾಣಿಕತೆ ಇಲ್ಲವೇ ಇಲ್ಲ.

(ಗೊಂದಲ)

ಈ ಹಂತದಲ್ಲಿ ಜೆ.ಡಿ(ಯು) ಸದಸ್ಯರುಗಳು, ಶ್ರೀ ವಾಟಾಳ್ ನಾಗರಾಜ್, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ಎಸ್. ರಾಜೇಂದ್ರನ್ ಮತ್ತು ಶ್ರೀ ಕೆ.